## ಉಚಿತ ಪ್ರತಿಗಳಿಗಾಗಿ ಮತ್ತು ಉಚಿತ ಪತ್ರಿಕೆಗಳಿಗಾಗಿ ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ




**ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಸಾಕೆ ಪತ್ರ ಬರೆಯಬಹುದು**


ನಮ್ಮ ವಿಳಾಸ :

**ದ ಕ್ರಿಸ್ಟಡೆಲ್ಫಿಯನ್ಸ್**

ಅಂಚೆ ಪೆಟ್ಟಿಗೆ ಸಂಖ್ಯೆ 4237

ಬೆಂಗಳೂರು - 560 042


# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು

ಸಂಚಿಕೆ 12

* ಯಶಸ್ಸು ಪಡೆಯಲು 21 ಸಲಹೆಗಳು
* ಅವುಗಳಿಂದ ಹೊರಗೆ ಬನ್ನಿರಿ
* ನೀವು ಕಳೆದುಹೋಗಿರುವಿರಾ?
* ಸಮಾಧಾನ, ಶಾಂತಿ ಮತ್ತು ಭದ್ರತೆಯನ್ನು ಪಡೆಯುವುದು ಹೇಗೆ
* ಮುಳುಗಿಹೋದ ವಿವಾದ
* ಬಿತ್ತುವವನು

## ಕ್ರಿಸ್ಟಡೆಲ್ಫಿಯನ್ನರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಅಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.

**ನೂತನ ಸೃಷ್ಟಿ ಪತ್ರಿಕೆಯ ತಂಡ**

ಲೀನಸ್ ಡ್ಯಾನಿಯಲ್ : ಸಂಯೋಜಕರು.

ಸುಧೀರ್ ಬಿ.ಜಿ : ಕಾರ್ಯ ನಿರ್ವಹಣೆ, ಮತ್ತು ಡಿ.ಟಿ.ಪಿ ಸಂಯೋಜಕರು.

ಬರ್ನಾಡಿನ್ : ಪುನರವಲೋಕನ.


**Co-ordinator : Linus Daniel**

**e-mail :**
**info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.


ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.

ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

***"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]***



# ಯಶಸ್ಸು ಪಡೆಯಲು 21 ಸಲಹೆಗಳು

1. ನಿಮ್ಮ ಸಮಯ ಮತ್ತು ಸಾಮರ್ಥ್ಯಕ್ಕೆ ಅನುಗುಣವಾದ ಕೆಲಸದಲ್ಲಿ ತೊಡಗಿ, ಕೆಲಸವನ್ನು ಆನಂದಿಸಿ.
2. ಜನರು ನಮ್ಮಿಂದ ನಿರೀಕ್ಷಿಸುವುದಕ್ಕಿಂತ ಅಧಿಕವಾಗಿ ನೀಡಿರಿ.
3. ಯಾವಾಗಲೂ ಧನಾತ್ಮಕವಾಗಿ ಯೋಚಿಸುವ ಅತ್ಯುತ್ಸಾಹಿ ವ್ಯಕ್ತಿಯಾಗಿರಿ.
4. ಬೇರೆಯವರನ್ನು ಕ್ಷಮಿಸುವ ಗುಣವನ್ನು ಹೊಂದಿಕೊಳ್ಳಿರಿ.
5. ಯಾವಾಗಲೂ ಉದಾರ ಸ್ವಭಾವದವರಾಗಿರಿ.
6. ಕೃತಜ್ಞತೆಯುಳ್ಳ ಹೃದಯವನ್ನು ಹೊಂದಿದವರಾಗಿರಿ.
7. ಪಟ್ಟುಹಿಡಿದು ಹಿಡಿದ ಕೆಲಸವನ್ನು ಸಾಧಿಸುವವರಾಗಿರಿ.
8. ನಿಮ್ಮ ಸಂಬಳ ಮಿತವಾಗಿದ್ದರೂ, ನಿಮ್ಮ ಹಣದ ಬಳಕೆಯಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳಿರಿ. ಹಾಗೆ ಮಾಡಿದರೆ ಹಣವನ್ನು ನಿಮಗೂ ಮತ್ತು ನಿಮ್ಮನ್ನು ನಂಬಿದವರಿಗೂ ಸದ್ಬಳಕೆ ಮಾಡಬಹುದಾಗಿದೆ.
9. ನಿಮ್ಮನ್ನು ಬೇರೆಯವರು ಹೇಗೆ ಗೌರವಿಸಬೇಕು ಎಂದು ನಿರೀಕ್ಷಿಸುತ್ತಿರೋ ಅದೇ ರೀತಿಯಾಗಿ ಇತರರನ್ನು ಗೌರವಿಸಿ ಆದರಿಸಿರಿ.
10. ಯಾವಾಗಲೂ ಕಲಿಯುವ ಸ್ವಭಾವವನ್ನು ಬೆಳೆಸಿಕೊಳ್ಳಿರಿ.
11. ನೀವು ಅತ್ಯುತ್ತಮವಾಗಿರಲು ಬದ್ಧವಾಗಿರಿ.
12. ಸಂತೋಷವು ನಾವು ಹೊಂದಿರುವ ಹಣ, ಶಕ್ತಿ ಅಥವಾ ಪದವಿಯಿಂದ ಸಿಗುವುದಿಲ್ಲ, ಅದು ನಾವು ಇತರರೊಟ್ಟಿಗೆ ಯಾವ ರೀತಿ ಸಂಬಂಧವಿಟ್ಟುಕೊಂಡಿದ್ದೇವೆ ಮತ್ತು ಬೇರೆಯವರನ್ನು ಹೇಗೆ ಗೌರವಿಸಿ ಪ್ರೀತಿಸುತ್ತೇವೆ ಎಂಬುದರಿಂದ ದೊರಕುತ್ತದೆ ಎಂಬುದನ್ನು ತಿಳಿಯಬೇಕು.



13. ಕರ್ತವ್ಯನಿಷ್ಠೆಯುಳ್ಳವರಾಗಿರಿ.
14. ಪ್ರಾಮಾಣಿಕರಾಗಿರಿ.
15. ಯಾವುದೇ ಕಾರ್ಯವನ್ನು ದೃಢವಾದ ನಿರ್ಧಾರದಿಂದ ಪ್ರಾರಂಭಿಸಿ.
16. ಯಾವಾಗಲೂ ನಿಮ್ಮ ಕಾರ್ಯದ ಅಂತಿಮ ನಿರ್ಧಾರವು ನಿಮ್ಮದೇ ಆಗಿರಲಿ.
17. ಇತರರನ್ನು ನಿಂದಿಸುವ ಕಾರ್ಯ ಮಾಡಬೇಡಿ.
18. ಯಾವಾಗಲೂ ಧೈರ್ಯ ಮತ್ತು ದೃಢತೆಯಿಂದ ಕಾರ್ಯ ನಡೆಸುವವರಾಗಿರಿ.
19. ನಿಮ್ಮ ಪ್ರೀತಿಪಾತ್ರರ ಬಗ್ಗೆ ವಿಶೇಷ ಕಾಳಜಿಯಿಂದಿರಿ.
20. ನಿಮ್ಮ ಜೀವನದಲ್ಲಿ ಸರಿಯಾದ ಸಹಕಾರಿ(ಗಂಡು/ಹೆಣ್ಣು) ಆರಿಸಿಕೊಂಡು ಮದುವೆಯಾಗಿ. ಸರಿಯಾದ ಸಹಕಾರಿ ಸಿಕ್ಕಲಿಲ್ಲ ಎಂಬ ಆತುರ ಬೇಡ, ಆಯ್ಕೆಯಲ್ಲಿ ಎಚ್ಚರವಿರಲಿ.
21. ನಿಮ್ಮ ತಂದೆ–ತಾಯಿಗಳ ಗೌರವಕ್ಕೆ ಕುಂದು ತರುವ ಯಾವ ಕೆಲಸವನ್ನು ಮಾಡಬೇಡಿ.

# “ಅವುಗಳಿಂದ ಹೊರಗೆ ಬನ್ನಿರಿ’’

“ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಬೆಳಕಿಗೂ ಕತ್ತಲೆಗೂ ಐಕ್ಯವೇನು?.... ಆದುದರಿಂದ ಅನ್ಯಜನರ ಮಧ್ಯದಿಂದ ಹೊರಟುಬಂದು ಪ್ರತೇಕವಾಗಿರಿ; ಅಶುದ್ಧವಾದ ಯವುದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ’’ (2ಕೊರಿಂಥ 6:14–15, 17).



ಈ ಮೇಲಿನ ವಾಕ್ಯಗಳು ನಮಗೆ ಅನೀತಿವಂತರ ಮತ್ತು ಲೌಕೀಕ ಸಂಗತಿಗಳಲ್ಲಿ ಮುಳುಗಿರುವಂತಹವರ ಸಂಪರ್ಕವನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸುತ್ತವೆ. ಸತ್ಯಮಾರ್ಗದಲ್ಲಿ ನಡೆಯುವ ನಂಬಿಕಸ್ತ ಜನರು ಅನ್ಯಜನರೊಟ್ಟಿಗೆ ಸಂಪರ್ಕ ಬೆಳೆಸುವುದನ್ನು ನಿರ್ದಾಕ್ಷಿಣ್ಯವಾಗಿ ನಿರ್ಬಂಧಿಸುತ್ತದೆ, ಆ ರೀತಿ ಅನ್ಯನಂಬಿಕೆಯುವರೊಟ್ಟಿಗೆ ಸೇರುವುದು ಅಸಂಬದ್ಧ ಜೋಡಿಗಳನ್ನು ಒಂದೇ ನೊಗಕ್ಕೆ ಸೇರಿಸಿದಂತಾಗುತ್ತದೆ.

ನಿಜದೇವರೊಂದಿಗಿನ ಅನ್ಯೋನ್ಯತೆಯಲ್ಲಿ ನಾವಿದ್ದರೆ ಆತನ ಪ್ರಸನ್ನತೆ ನಮ್ಮ ಜೀವನದ ಎಲ್ಲಾ ಮೂಲೆಗಳಿಗೂ ಹರಡಿ ವ್ಯಾಪಿಸಿಕೊಳ್ಳುತ್ತದೆ. ಅದು ನಮ್ಮನ್ನು ಯಾವಾಗಲೂ ಮೇಲಕ್ಕೆ ತರುವಂತಹುದಾಗಿದ್ದು ನಮ್ಮನ್ನು ಆತ್ಮೀಕವಾಗಿ ಪರಿಪೂರ್ಣಗೊಳಿಸುತ್ತದೆ ಮತ್ತು ನಾವು ನಮ್ಮ ಪರಲೋಕದಲ್ಲಿರುವ ತಂದೆಯ ಮಕ್ಕಳಾಗಿ ಆತನ ಮನೆಯವರು ಆಗುವಂತೆ ಮಾಡುತ್ತದೆ.

1. **ನೀವು ಕ್ರಿಸ್ತ ನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ(ವ.14) :–** ನೊಗಕ್ಕೆ ಯಾವಾಗಲೂ ಎರಡು ಎತ್ತುಗಳನ್ನು ಕಟ್ಟಲಾಗಿರುತ್ತದೆ. ಅವೆರಡೂ ಒಂದೇ ಮನಸ್ಥಿತಿಯುಳ್ಳವುಗಳಾಗಿದ್ದು, ಯಾವಾಗಲೂ ಅವೆರೆಡೂ ಜೊತೆಯಾಗಿ ಉಳುವ ಕಾರ್ಯವನ್ನು ಮಾಡಬೇಕು, ಅವುಗಳು ಚಲಿಸುವ ದಿಕ್ಕು ಮತ್ತು ಮಾರ್ಗ ಒಂದೇ ಆಗಿರಬೇಕು, ಹಾಗಾದಾಗ ಮಾತ್ರ ಕಾರ್ಯಗಳು ಯಶಸ್ವಿಯಾಗುತ್ತವೆ. ಅದೇ ರೀತಿ ನಾವುಗಳು ಕ್ರಿಸ್ತನೊಂದಿಗೆ ಸೇರಿದವರಾಗಿದ್ದು ಒಂದೇ ನೊಗಕ್ಕೆ ಕಟ್ಟಲ್ಪಟ್ಟಿದ್ದೇವೆ(ಮತ್ತಾಯ 11:28–29), ಅದೇ ಸಂದರ್ಭದಲ್ಲಿ ನಾವುಗಳು ಅಂದರೆ ಕ್ರಿಸ್ತನಂಬಿಕೆಯ ಸಹೋದರ ಸಹೋದರಿಯರು ಒಬ್ಬರಿಗೊಬ್ಬರು ಒಂದೇ ನೊಗಕ್ಕೆ ಕಟ್ಟಲ್ಪಟ್ಟಿರುವವರು ಆಗಿದ್ದೇವೆ. ನಮ್ಮ ಜೀವಿತದಲ್ಲಿ ನಾವು ಒಬ್ಬರಿಗೊಬ್ಬರು ಸಮವಾದ ಆತ್ಮೀಕ ಪಾಲುದಾರಿಕೆ ಮತ್ತು ಜವಬ್ದಾರಿಯನ್ನು ಹೊಂದಿದವರಾಗಿದ್ದೇವೆ. ಆದುದರಿಂದ ಕ್ರಿಸ್ತ ನಂಬಿಕೆಯ ಸಹೋದರ ಸಹೋದರಿಯರು ತಮ್ಮ ಜೀವಿತದ ಎಲ್ಲಾ ಕಾಲಗಳಲ್ಲಿಯೂ ನಮ್ಮ ರಕ್ಷಕನೂ, ಗುರುವೂ ಆದ ಕ್ರಿಸ್ತನಿಗೆ ಹೊಂದಾಣಿಕೆಯಾಗಲು ಪ್ರಯತ್ನಿಸಿ ಅದರಂತೆಯೇ ನಡೆಯಬೇಕು. ನಾವು ಕೂಡ ಆತನಂತೆಯೇ



ಆಗಬೇಕಾದರೆ ಇರುವ ಒಂದೇ ದಾರಿಯೆಂದರೆ, ನಾವುಗಳು ಸಹ ಆತನಂತೆಯೇ ಜೀವಿಸಿ ನಡೆಯಬೇಕಾಗುತ್ತದೆ, ಆಗ ಆತನು ನಮ್ಮ ನೊಗವನ್ನು ಆತನ ಮೇಲೆ ತೆಗೆದುಕೊಂಡು ನಮಗೆ ವಿಶ್ರಾಂತಿಯನ್ನು ಕೊಡುವವನಾಗಿದ್ದಾನೆ(ಮತ್ತಾಯ 11:28–30).

2. **ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? (ವ.14) :–** ಈ ವಾಕ್ಯದಲ್ಲಿ ‘ಜೊತೆ’ ಎಂಬ ಪದವನ್ನು ‘ಪಾಲುದಾರಿಕೆ’ ಮತ್ತು ‘ಅನ್ಯೋನ್ಯತೆ’ ಎಂಬ ಅರ್ಥದಲ್ಲಿ ಬಳಸಲಾಗಿದೆ. ಅಂದರೆ ಯಾವುದೆ ವಿಷಯದಲ್ಲಿಯೂ ಸಹ ಪಾಲುತೆಗೆದುಕೊಳ್ಳುವುದಾಗಿದೆ. ತಂದೆಯಾದ ದೇವರು ಕ್ರಿಸ್ತನ ಮೂಲಕ ಮಾನವರು ರಕ್ಷಣೆ ಹೊಂದಬೇಕೆಂದು ನೀತಿಮಾರ್ಗವನ್ನು ಸಿದ್ಧಪಡಿಸಿದ್ದಾನೆ. ನಾವು ಕ್ರಿಸ್ತನೊಂದಿಗೆ ಪಾಲುದಾರಿಕೆ ಹೊಂದಬೇಕೇ ಹೊರತು, ಅಧರ್ಮದ ಜೊತೆಗೆ ಪಾಲುದಾರಿಕೆ ಹೊಂದಬಾರದು. ಹಾಗೇನಾದರೂ ಅಧರ್ಮ ಅಥವಾ ಅನೀತಿಯಲ್ಲಿ ಪಾಲುದಾರಿಕೆ ಹೊಂದಿದರೆ ಕ್ರಿಸ್ತನಲ್ಲಿ ನಮಗೆ ಪಾಲುದಾರಿಕೆ ತಪ್ಪಿಹೋಗಿ ಪ್ರಾಣನಷ್ಟ ಪಡಬೇಕಾಗುತ್ತದೆ. ಆದುದರಿಂದ ಕ್ರಿಸ್ತನೊಂದಿಗೆ ಪಾಲುದಾರಿಕೆ ಜೀವಕ್ಕೆ ಮಾರ್ಗವಾಗಿದೆ.

3. **ಬೆಳಕಿಗೂ ಕತ್ತಲೆಗೂ ಐಕ್ಯವೇನು? (ವ.14) :–** ಈ ವಾಕ್ಯದಲ್ಲಿ ತಿಳಿಸಿರುವ ‘ಜೊತೆ’ ಎಂಬುವ ಪದ ಮೂಲ ಗ್ರೀಕ್ ಭಾಷೆಯ ‘‘ಕೊಯಿನೊನಿಯ’’ ಎಂಬ ಪದದಿಂದ ಭಾಷಾಂತರ ಮಾಡಲಾಗಿದೆ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಎಂದು ಪ್ರಶ್ನೆ ಹಾಕುವುದಕ್ಕೆ ಕಾರಣವೆಂದರೆ–ಈ ರೀತಿಯ ಜೊತೆ ಅಸಾಧ್ಯವಾದುದಾಗಿದೆ, ಹೇಗಂದರೆ ಒಂದೇ ಸ್ಥಳದಲ್ಲಿ ಬೆಳಕು ಮತ್ತು ಕತ್ತಲೆ ಜೊತೆಯಾಗಿರಲು ಸಾಧ್ಯವೇ? ಅದೇರೀತಿ ಯಾರು ಕ್ರಿಸ್ತನಂಬಿಕೆ ಬಂದಮೇಲೂ ಸಹ ಹಳೆಯ ನಾಶನದ ಮಾರ್ಗದಲ್ಲಿ ಇರಬಾರದು ಎಂಬುದನ್ನು ತಿಳಿಸಲಾಗಿದೆ. ಅದೇರೀತಿ ಯಾರು ದೇವರ ಮಾರ್ಗಕ್ಕೆ ಅಂದರೆ ಬೆಳಕಿನ ಮಾರ್ಗಕ್ಕೆ ಬಂದಮೇಲೆ ಮತ್ತೆ ಕತ್ತಲೆಯಲ್ಲಿ(ಅಧರ್ಮ ಮಾರ್ಗ) ನಡೆದರೆ ಅವರುಗಳು ಸುಳ್ಳುಗಾರರಾಗಿದ್ದಾರೆ(1ಯೋಹಾನ 1:5–7). ನಾವುಗಳು ಸತ್ಯವನ್ನು ಸರಿಯಾಗಿ ಅರಿತುಕೊಳ್ಳಬೇಕು ಮತ್ತು ಸತ್ಯದ ಅನ್ಯೋನ್ಯತೆಯ ಬೆಳಕು ನಮ್ಮ ಕಾರ್ಯಗಳ ಮೂಲಕ ಹೊಸಜೀವಿತದಲ್ಲಿ ತೋರಿಬರಬೇಕು(1ಯೋಹಾನ 2:29, 3:7, ಯೋಹಾನ 3:19–21, 8:39, 10:37). ಕತ್ತಲೆಯಲ್ಲಿ ನಡೆಯುವುದು ಎಂದರೆ ಅಸತ್ಯ ಮಾರ್ಗವನ್ನು ಅನುಸರಿಸುವುದು ಮಾತ್ರವಲ್ಲ, ಸತ್ಯಮಾರ್ಗದಲ್ಲಿ ಜೀವಿಸುತ್ತಿದ್ದು ತನ್ನ ಸಹೋದರನನ್ನು ದ್ವೇಷಿಸುವ ಪ್ರತಿಯೊಬ್ಬನೂ ಕತ್ತಲೆಯ ಮಾರ್ಗದವನು ಆಗಿದ್ದಾನೆ (1ಯೋಹಾನ 2:11).

4. **ಕ್ರಿಸ್ತನಿಗೂ ವಿಗ್ರಹಗಳಿಗೂ ಒಡನಾಟವೇನು? (ವ. 15) :–** ‘ಒಡನಾಟ’ ಎಂಬ ಪದವು ಒಂದು ಗುಂಪನ್ನು ಕುರಿತು ತಿಳಿಸಿರುವುದಾಗಿದೆ. ಉದಾಹರಣೆಗೆ ಒಂದು ವಾದ್ಯಗೋಷ್ಠಿಯಲ್ಲಿ ಹಲವಾರು ಮಂದಿಯಿದ್ದು ಅವರು ಬೇರೆಬೇರೆಯ ವಾದ್ಯಗಳನ್ನು ಬಾರಿಸುವವರಾಗಿರುತ್ತಾರೆ ಮತ್ತು ಅವರಿಗೆ ಮೊದಲೇ ಯಾವ ಸಂಗೀತಕ್ಕೆ ಯಾವ ರಾಗದಲ್ಲಿ ಬಾರಿಸಬೇಕು ಎಂಬುದಾಗಿ ತರಬೇತಿ ನೀಡಲಾಗಿರುತ್ತದೆ. ಅವರು ಅದೇರೀತಿಯಲ್ಲಿ ವಾದ್ಯಗಳನ್ನು ನುಡಿಸಬೇಕಾಗುತ್ತದೆ, ಅವರುಗಳು ಆ ನಿಯಮಕ್ಕೆ ಒಳಪಟ್ಟು ನುಡಿಸಬೇಕೇ ವಿನಃ ತಮಗೆ ಇಷ್ಟಬಂದ ರೀತಿಯಲ್ಲಿ ವಾದ್ಯಗಳನ್ನು ನುಡಿಸುವುದಕ್ಕೆ ಆಸ್ಪದವಿರುವುದಿಲ್ಲ. ಅದೇರೀತಿ ನಮ್ಮ ಆತ್ಮೀಕ ಜೀವನವುಸಹ ಕ್ರಿಸ್ತನ ಒಡನಾಟಕ್ಕೆ ಸೇರಿರುವಂತಹದು ಆಗಿದೆ.

ಈಗ ನಾವು ಆತನ ನಿಯಮಕ್ಕೆ ಅನುಗುಣವಾಗಿ ನಮ್ಮ ಜೀವನವನ್ನು ನಡೆಸಬೇಕೇ ಹೊರತು, ಅನ್ಯನಂಬಿಕೆಯನ್ನು ವಿಗ್ರಹಗಳ ಒಡನಾಟವನ್ನು ಮಾಡುವ ಹಾಗಿಲ್ಲ. ನಾವುಗಳು ಏಕಕಾಲದಲ್ಲಿ ಕ್ರಿಸ್ತನನ್ನು ಮತ್ತು ವಿಗ್ರಹ(ಅನ್ಯಆಚಾರ)ಗಳನ್ನು ಎರಡನ್ನೂ ಅನುಸರಿಸಲು ಸಾಧ್ಯವಿಲ್ಲ. ಹೇಗೆ ಎರಡು ಭಿನ್ನ ಹಾಡುಗಳನ್ನು ಒಂದೇಸಾರಿ ಒಂದೇವ್ಯಕ್ತಿ ಹಾಡಲು ಸಾಧ್ಯವಿಲ್ಲವೋ ಅದೇರೀತಿ ನಾವು ಸತ್ಯ ಮತ್ತು ಅಸತ್ಯ ಎರಡನ್ನು ಒಂದೇಸಾರಿ ಅನುಸರಿಸಲು ಸಾಧ್ಯವಿಲ್ಲ. ನಾವು ಒಂದುಬಾರಿ ಒಂದು ಗೀತೆಯನ್ನು ಹಾಡಬಲ್ಲೆವು. ಯೇಸುಕ್ರಿಸ್ತ ಬೆಳಕಿನ(ಸತ್ಯಮಾರ್ಗ)ಲ್ಲಿ ನಡೆದು ನಮಗಾಗಿ ಮಾದರಿಯನ್ನು ತೋರಿಸಿಕೊಟ್ಟು ಹೋಗಿದ್ದಾನೆ. ಆದುದರಿಂದ ನಾವುಗಳು ಸಹ ಆತನ ಸತ್ಯಮಾರ್ಗದಲ್ಲೇ ನಡೆಯುವವರಾಗಬೇಕು.

**5. ನಂಬುವವನಿಗೂ ನಂಬದೆ ಇರುವವರಿಗೂ ಪಾಲುದಾರಿಕೆ ಏನು? (ವ.15) :–** ಪಾಲುದಾರಿಕೆ ಎಂದರೆ ಇರುವಂತಹ ಆಸ್ತಿಯಲ್ಲಿ ಸಮವಾದ ಹಕ್ಕು ಆಗಿದೆ. ಅಂದರೆ ಇರುವಂತಹ ಸಂಪತ್ತಿನಲ್ಲಿ ಬಾಧ್ಯತೆಯನ್ನು ಕೊಡುವಂತದು ಆಗಿದೆ. ಈ ವಾಕ್ಯವನ್ನು ಹಳೆಯ ಒಡಂಬಡಿಕೆಯ ಹಿನ್ನೆಲೆಯ ಸ್ವಾಸ್ಥ್ಯದ ಆಧಾರದಿಂದ ಕೊಡಲಾಗಿದೆ. ನಂಬಿಕಸ್ತರಿಗೂ ಮತ್ತು ಅಪನಂಬಿಕಸ್ತರಿಗೂ ಯಾವುದೇ ಕಾರಣಕ್ಕೂ ಸಮನಾದ ಪಾಲುದಾರಿಕೆ ಇರಲಿಲ್ಲ ಮತ್ತು ನಿಜದೇವರ ಹಿಂಬಾಲಕ ಯಾವುದೇ ಕಾರಣಕ್ಕೂ ಅನ್ಯರೊಂದಿಗೆ ಸೇರುವಹಾಗಿರಲಿಲ್ಲ, ಮತ್ತು ಅವರಲ್ಲಿ ಯಾವುದೇ ಪಾಲುತೆಗೆದುಕೊಳ್ಳುವಂತಿರಲಿಲ್ಲ. ಅದೇರೀತಿ ಇವರೂ(ನಂಬಿಕಸ್ತರು) ಕೂಡ ಅವರೊಂದಿಗೆ ಯಾವುದೇ ಪಾಲುದಾರಿಕೆ ಕೊಡುವಹಾಗಿರಲಿಲ್ಲ. ಆದುದರಿಂದ ಕ್ರಿಸ್ತ ನಂಬಿಕೆಯವರು ಯಾವುದೇ ಕಾರಣಕ್ಕೂ ಅನ್ಯನಂಬಿಕೆಯವರೊಂದಿಗೆ ಸೇರಬಾರದು ಎಂದು ಸ್ಪಷ್ಟವಾಗಿ ಈ ವಾಕ್ಯದಲ್ಲಿ ತಿಳಿಸಲಾಗಿದೆ.

**6. ದೇವರ ಮಂದಿರಕ್ಕೂ ವಿಗ್ರಹಗಳಿಗೂ ಒಪ್ಪಿಗೆ ಏನು? (ವ.16) :–** ಈ ವಾಕ್ಯದಲ್ಲಿ ಒಪ್ಪಿಗೆ ಎನ್ನುವ ಪದವನ್ನು ಜೊತೆಯಾಗಿ ಗಂಟುಮಾಡುವುದು ಅಥವಾ ಸಹಭಾಗಿತ್ವದಪಾಲು ಎಂಬುವ ರೀತಿಯಲ್ಲಿ ತಿಳಿಸಿದೆ. ಸಭೆಯ ಪ್ರತಿಯೊಬ್ಬರೂ ದೇವರ ಆಲಯವಾಗಿದ್ದಾರೆ. ದೇವರೇ ನಮ್ಮಲ್ಲಿ ವಾಸಿಸುತ್ತಾನೆ(ವಚನ 16) ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಅಂತಹ ಸಂದರ್ಭದಲ್ಲಿ ನಾವುಗಳು ಯಾವುದೇ ಕಾರಣಕ್ಕೂ ವಿಗ್ರಹ(ಅನ್ಯನಂಬಿಕೆ)ಗಳು ನಮ್ಮ ಹೃದಯದಲ್ಲಿ ಸ್ಥಾಪಿತವಾಗುವಂತಹ ಅವಕಾಶ ಕೊಡಬಾರದು ಎಂದು ತಿಳಿಸಿದೆ. ಏಕಂದರೆ ನಾವುಗಳು ದೇವರ ಆಲಯವಾಗಿರುವುದರಿಂದ ನಮ್ಮಲ್ಲಿ ದೇವರು ಮಾತ್ರ ವಾಸಿಸುವಂತಹ ಪವಿತ್ರ ಆಲಯುವಾಗಿರಬೇಕೇ ಹೊರತು ವಿಗ್ರಹಗಳ ಮಂದಿರವಾಗಬಾರದು. ನಾವುಗಳು ಕ್ರಿಸ್ತನನ್ನು ಮಾತ್ರ ಅನುಸರಿಸಿ ನಡೆಯಬೇಕು.

''ಆದುದರಿಂದ ಅನ್ಯಜನರ ಮಧ್ಯದಿಂದ ಹೊರಟುಬಂದು ಪ್ರತೇಕವಾಗಿರಿ; ಅಶುದ್ಧವಾದ ಯಾವುದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ.....'' ಪೌಲನ ಈ ಬೋಧನೆ ನಮ್ಮನ್ನು ಒಬ್ಬ ನಿಜಕ್ರೈಸ್ತ ಹೇಗಿರಬೇಕು ಮತ್ತು ಕ್ರಿಸ್ತನನ್ನು ಹೇಗೆ ಹಿಂಬಾಲಿಸಬೇಕು ಮತ್ತು ಕೆಟ್ಟವುಗಳಿಂದ ಹೇಗೆ ಹೊರಬಂದು ಪವಿತ್ರರಾಗಿರಬೇಕು ಅನ್ಯರಿಂದ, ಕತ್ತಲೆಯ ಜೀವಿತದಿಂದ ಹೇಗೆ ಭಿನ್ನವಾಗಿ ಬೆಳಕಿನವರಾಗಿರಬೇಕು ಎಂದು ತಿಳಿಸಿಕೊಡುತ್ತದೆ.



# ನೀವು ಕಳೆದುಹೋಗಿರುವಿರಾ?



ತುಂಬಾಹಿಂದೆ ಒಬ್ಬ ಮನುಷ್ಯ ಒಂದು ಹಳ್ಳಿಯನ್ನು ಹಾದುಹೋಗುತ್ತಿದ್ದ, ಆ ಹಳ್ಳಿಯ ಒಂದು ಮನೆಯ ಮುಂದೆ ಒಬ್ಬ ರೈತ ಬಹಳ ಖಿನ್ನನಾಗಿ, ಯೋಚಿಸುತ್ತಾ ಬೇಲಿಯ ಮೇಲೆ ಕುಳಿತಿದ್ದ. ಆ ಪ್ರಯಾಣಿಕ ರೈತನನ್ನು ತಾನು ಹೋಗಬೇಕಾಗಿರುವ ದಾರಿಯ ಬಗ್ಗೆ ವಿಚಾರಣೆ ಮಾಡಿದ– ಸ್ವಾಮಿ ದಯಮಾಡಿ ಸೆಂಟರ್ ವಿಲ್ಲೆಗೆ ಹೇಗೆ ಹೋಗಬೇಕು ತಿಳಿಸುವಿರಾ? ಎಂದು ಕೇಳಿದ, ರೈತ ''ಗೊತ್ತಿಲ್ಲ'' ಎಂದನು. ಹೋಗಲಿ 14ನೇ ಹೆದ್ದಾರಿಗೆ ಹೇಗೆ ಹೋಗಬೇಕು ತಿಳಿಸುವಿರಾ? ಎಂದನು, ಅದಕ್ಕೆ ಕೂಡ ಆ ವಯಸ್ಸಾದ ರೈತನು ''ಗೊತ್ತಿಲ್ಲ'' ಎಂದನು. ಮತ್ತೆ ಪ್ರಯಾಣಿಕ ಸ್ವಾಮಿ, ದಯಮಾಡಿ ಈ ಪ್ರದೇಶದ ಗಡಿಭಾಗಕ್ಕೆ ಎಷ್ಟು ದೂರವಾಗಿತ್ತದೆ ಎಂಬುದನ್ನು ತಿಳಿಸಿ ಎಂದನು, ರೈತ ಮತ್ತೆ ಅದೇ ಉತ್ತರವನ್ನು ನಿರ್ವಿಕಾರವಾಗಿ ''ಗೊತ್ತಿಲ್ಲ'' ಎಂದನು. ರೈತನ ಈ ರೀತಿಯ ಉತ್ತರದಿಂದ ಬೇಸರ ಮತ್ತು ಕೋಪ ಎರಡೂ ಪ್ರಯಾಣಿಕನಿಗೆ ಬಂದಿತು, ಆತ ಅದೇ ಕೋಪದಲ್ಲಿ ಆ ಹಳ್ಳಿಯ ರೈತನಿಗೆ ಹಾಗದರೆ ನಿನಗೇನು ಗೊತ್ತಿಲ್ಲ ಅಲ್ಲವೇ? ಎಂದು ಬಿರುಸಾಗಿ ಪ್ರಶ್ನೆಮಾಡಿದನು. ಅದಕ್ಕೆ ಪ್ರತಿಯಾಗಿ ಆ ಹಳ್ಳಿಯವನು ಬಹಳ ನಿಧಾನವಾಗಿ ನಾನು ಕಳೆದುಹೋಗಿದ್ದೇನೆ ಎಂದು ಹೇಳಿದ.

ಇದರಿಂದ ನಮಗೆ ತಿಳಿಯುವ ಅಂಶವೆಂದರೆ, ನಾವು ಎಲ್ಲಿಯೂ ಹೋಗದೆ ಒಂದೇಕಡೆ ಸುಮ್ಮನೆ ಕುಳಿತರೆ ನಾವುಸಹ ಹಳ್ಳಿಯವನ ರೀತಿಯಲ್ಲಿ ಕಳೆದು ಹೋಗಿದ್ದೇವೆ ಎಂಬುದಾಗಿದೆ. ಅದೇರೀತಿ ನಾವು ನಮ್ಮ ಸುತ್ತಲೂ ಬೇಲಿಹಾಕಿಕೊಂಡು ಯಾರೊಟ್ಟಿಗೂ ಸೇರದೆ, ತಿಳಿಯದೆ, ತಿಳಿಸದೆ, ಸುಮ್ಮನೆ ಒಂದೆಡೆ ಕುಳಿತಿರುವ ಬದಲು ಸರಿಯಾದ ಮಾರ್ಗವನ್ನು ಹುಡುಕಿ ಆ ಮಾರ್ಗದಲ್ಲಿ ನಡೆಯಬೇಕಾಗುತ್ತದೆ. ಆ ರೀತಿ ನಾವು ಹೊರಟಾಗ ನಮ್ಮ ಯಾತ್ರೆಯಲ್ಲಿ ವಿಶಾಲವಾದ ಮಾರ್ಗ ಮತ್ತು ಇಕ್ಕಟ್ಟಾದ ಮಾರ್ಗ ಎರಡೂ ಕೂಡ ಸಿಕ್ಕುತ್ತವೆ, ಆದರೆ ಸುಮ್ಮನೆ ಕುಳಿತಿದ್ದರೆ ಯಾವ ಮಾರ್ಗವೂ ಸಿಕ್ಕುವುದಿಲ್ಲ. ಎಲ್ಲಿಯೂ ಹೋಗದೆ ಸೋಮಾರಿಯಾಗಿ ಕುಳಿತಿರುವ ರೈತನಂತಹ ಸ್ನೇಹಿತರಿಗೆ ಅರಸನಾದ ಸೊಲೋಮೋನನು ಬಹಳ ಸ್ಪಷ್ಟವಾಗಿ ತಿಳುವಳಿಕೆಯನ್ನು ನೀಡಿದ್ದಾನೆ. ದುಡಿಯಲು ಸಾಕಷ್ಟು ಭೂಮಿ(ಜಮೀನು) ಇದ್ದರೂ ಕೂಡ ಸೋಮಾರಿಯಾಗಿ ಅದನ್ನು ಉಳುಮೆ ಮಾಡದಿದ್ದರೆ, ವ್ಯವಸಾಯ ಮಾಡದಿದ್ದರೆ ಆ ಭೂಮಿಯಲ್ಲಿ ಮುಳ್ಳುಗಳೂ, ಕಳೆಗಳು ಬೆಳೆದು ತುಂಬಿಕೊಂಡು ಆ ಜಮೀನನ್ನು ಉಪಯೋಗ ಹೀನವಾಗಿ ಮಾಡುತ್ತವೆ. ಸೊಲೋಮೋನನು ಸೋಮಾರಿಯಾದ ಮಾನವನಿಗೆ ಈ ರೀತಿಯಾಗಿ

ಎಚ್ಚರಿಸುತ್ತಾನೆ–''ಸೋಮಾರಿಯೇ, ಇರುವೆಯ ಹತ್ತಿರ ಹೋಗಿ ಅದರ ನಡುವಳಿಕೆಯನ್ನು ನೋಡಿ ಜ್ಞಾನವನ್ನು ತಂದುಕೋ.......... ಸೋಮಾರಿಯೇ ಎಷ್ಟು ಹೊತ್ತು ನಿದ್ದೆ? ನಿದ್ರೆಯಿಂದ ಯಾವಾಗ ಎಚ್ಚರಗೊಳ್ಳುವಿ? ಇನ್ನು ಸ್ವಲ್ಪ ನಿದ್ದೆ, ಇನ್ನು ತುಸ ತೂಕಡಿಕೆ, ಇನ್ನೂ ಕೊಂಚ ನಿದ್ದೆಗಾಗಿ ಕೈಮುದುರಿಕೊಳ್ಳುವೆ ಅಂದುಕೊಳ್ಳುವೆಯಾ? ಬಡತನವು ದಾರಿಗಳ್ಳನ ಹಾಗೂ ಕೊರತೆಯು ಪಂಜುಗಳ್ಳನಂತೆಯೂ, ನಿನ್ನ ಮೇಲೆ ಬೀಳುವುವು'' (ಜ್ಞಾನೋಕ್ತಿ 6:6–11).

ಪ್ರಪಂಚದಲ್ಲಿ ಬಹುಪಾಲು ಮಂದಿಗೆ ನಾವು ಎಲ್ಲಿದ್ದೇವೆ ಎಂಬುದೇ ತಿಳಿದಿಲ್ಲ, ಅವರುಗಳಿಗೆ ನಾವು ಇಲ್ಲಿಗೆ ಏಕೆ ಬಂದಿದ್ದೇವೆ ಎಂಬುದೇ ಗೊತ್ತಿಲ್ಲ, ಅವರು ಸುಮ್ಮನೆ ದಾರಿಯಪಕ್ಕದಲ್ಲಿ ಕುಳಿತ ಸೋಮಾರಿ ರೈತನ ರೀತಿಯಲ್ಲಿ ಯಾವುದೇ ನಿರೀಕ್ಷೆಯಿಲ್ಲದೆ ಜಡವಾಗಿ ಬಿದ್ದಿದ್ದಾರೆ. ಜೀವನವು ಕಳೆದಂತೆ ನಿಜವಾಗಿಯೂ ಅವರು ಕಳೆದುಹೋಗಿರುತ್ತಾರೆ, ಜೊತೆಗೆ ಅವರಿಗೆ ತಮ ಸುತ್ತಾಮುತ್ತಲಿನ ಯಾವುದೇ ಅರಿವು ಅವರಿಗಿರುವುದಿಲ್ಲ.

ಯಾರಾದರೂ ನಮ್ಮ ಹತ್ತಿರ ಏನಾದರೂ ಬಯಸಿದಾಗ, ಉದಾಹರಣೆಗೆ ಆ ಪ್ರಯಾಣಿಕ ರೈತನನ್ನು ದಾರಿಯ ಬಗ್ಗೆ ಕೇಳಿದಾಗ ಆತ ಪ್ರಯಾಣಿಕನಿಗೆ ದಾರಿ ತೋರಿಸುವ ಪ್ರಯತ್ನ ಮಾಡಬಹುದಿತ್ತು. ಆದರೆ ಅದಕ್ಕೆ ಬದಲಾಗಿ ಆತ ನಿರ್ಲಿಪ್ತನಂತೆ ಕುಳಿತು ಕಳೆದುಹೋಗಿದ್ದಾನೆ, ಅಂದರೆ ಯಾವುದೇ ನಿರೀಕ್ಷೆ ಇಲ್ಲದೆ ಜೀವಬಿಡುತ್ತಿದ್ದಾನೆ ಎಂಬುದಾಗಿ ತಿಳಿಯಬಹುದು. ಈ ಘಟನೆ ನಮಗೂ ಕೂಡ ನೇರವಾಗಿ ಅನ್ವಯವಾಗುತ್ತದೆ. ಏಕಂದರೆ ನಾವೆಲ್ಲರೂ ನಿರೀಕ್ಷೆಯಿಲ್ಲದೆ ಈ ಲೋಕದಲ್ಲಿ ಜನಿಸಿರುತ್ತೇವೆ, ಆದರೆ ನಾವು ಬೆಳೆಯುತ್ತಾ ಹೋದಂತೆ ಸರಿಯಾದ ಮಾರ್ಗವನ್ನು ಹುಡುಕಿ ಆರಿಸಿಕೊಳ್ಳಬೇಕು, ಅದಕ್ಕಾಗಿ ಶ್ರಮಪಡಬೇಕು. ಅದಕ್ಕೆ ಬದಲಾಗಿ ಸೋಮಾರಿಯಾದ ಹಳ್ಳಿಯ ರೈತಮಿತ್ರನ ರೀತಿಯಲ್ಲಿ ಸುಮ್ಮನೆ ಕುಳಿತರೆ ನಮಗೆ ಯಾವ ಮಾರ್ಗ ಸಿಕ್ಕುತ್ತದೆ ಎಂಬುದನ್ನು ಅರಸನಾದ ಸೊಲೋಮೋನ ತಿಳಿಸಿದ್ದಾನೆ– ''ಮನುಷ್ಯನ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು, ಕಟ್ಟಕಡೆಗೆ ಅದು ಮರಣ ಮಾರ್ಗವೇ'' (ಜ್ಞಾನೋಕ್ತಿಗಳು 16:25).

ನಾವುಗಳು ಕಾಡಿನ ಮಧ್ಯೆ ಎಲ್ಲೋ ಕಳೆದುಹೋಗಿದ್ದೇವೆ ಎಂದು ಭಾವಿಸಿದರೆ, ಆಗ ನಮ್ಮ ಬಳಿಯಲ್ಲಿ ದಿಕ್ಸೂಚಿ ಇದ್ದರೆ ಅದರ ಮೂಲಕ ಉತ್ತರ ದಿಕ್ಕು ಯಾವುದು ಎಂಬುದನ್ನು ತಿಳಿಯಬಹುದು, ಆಗ ಬೇರೆಯವರು ನಮಗೆ ದಿಕ್ಕುಗಳ ಬಗ್ಗೆ ಮೋಸ ಮಾಡಲು ಯತ್ನಿಸಿದರೆ, ನಾವು ಉಪಕರಣ(ದಿಕ್ಸೂಚಿ)ದ ಮೇಲೆ ಸ್ಥಿರವಾದ ನಂಬಿಕೆ ಇಟ್ಟು ಅದರ ಮಾರ್ಗದರ್ಶನದಲ್ಲಿ ನಡೆದರೆ ನಾವು ಆ ಕಾಡಿನಿಂದ ಹೊರಬರಬಹುದು.

ಹೇಗೆ ನಾವು ಕಾಡಿನಲ್ಲಿ ಕಳೆದುಹೋದಾಗ ಆ ದಿಕ್ಸೂಚಿಯ ಮೂಲಕವಾಗಿ ನಾವು ಜೀವವನ್ನು ಉಳಿಸಿಕೊಳ್ಳಬಹುದೋ, ಅದೇರೀತಿ ನಾವು ಈ ಲೋಕದಲ್ಲಿ ಕಳೆದುಹೋಗಿದ್ದೇವೆ ಎಂದು ತಿಳಿದಾಗ ನಮ್ಮ ದಿಕ್ಸೂಚಿ ಯೇಸುಕ್ರಿಸ್ತನೇ ಆಗಿದ್ದಾನೆ. ನಾವು ಆತನಲ್ಲಿ ಸ್ಥಿರವಾಗಿ ನಂಬಿಕೆಯಿಟ್ಟು ಆತನನ್ನೇ ಆತುಕೊಂಡರೆ ನಾವು ಈ ಲೋಕದ ಮರಣದಿಂದ ಹೊರಬಂದು ಜೀವದ ಕಡೆಗೆ ನಡೆಯಬಹುದು.

ಆದ್ದರಿಂದ ನಮ್ಮ ಜೀವನದ ಮುಖ್ಯಗುರಿ ಆ ನಿತ್ಯರಾಜ್ಯವನ್ನು ಸೇರುವುದಾಗಿರಬೇಕು, ಆ ನಿಟ್ಟಿನಲ್ಲಿ ನಾವು ನಂಬಿಕೆಯಿಂದ ಪ್ರಯತ್ನಿಸುವುದೇ ಆದರೆ ನೀತಿವಂತನಾದ ದೇವರು ನಮಗೆ ಆ ದಾರಿಯನ್ನು ತೋರಿಸಿಕೊಡುವನು.



# ಸಮಾಧಾನ, ಶಾಂತಿ ಮತ್ತು ಭದ್ರತೆಯನ್ನು ಪಡೆಯುವುದು ಹೇಗೆ

***ಮನಸ್ಸಿನ ಸಮಾಧಾನ :–***

ಎಲ್ಲರೂ ಕೂಡ ಮನಸ್ಸಿನಲ್ಲಿ ಶಾಂತಿ, ನೆಮ್ಮದಿ, ಸಮಾಧಾನ ಇರಬೇಕೆಂದು ಬಯಸುತ್ತಾರೆಯೆ ಹೊರತು, ಶಾಂತಿಗೆ ವಿರುದ್ಧವಾದ ಅಸಮಧಾನ, ವ್ಯಾಕುಲತೆ ಮತ್ತು ಭಯದಿಂದ ಇರಬೇಕೆಂದು ಎಂದೂ ಬಯಸುವುದಿಲ್ಲ. ಇದು ಒಳ್ಳೆಯ ಯೋಚನೆಯೇ ಸರಿ, ಆದರೆ ಮಾನವನ ಜೀವಿತದಲ್ಲಿ ಅನೇಕ ಸಂಗತಿಗಳು ಸಂಭವಿಸುತ್ತಿರುತ್ತವೆ, ಆಗ ಮನಸ್ಸಿನಲ್ಲಿ ಏರುಪೇರುಗಳಾಗುವುದು, ಮಾನಸಿಕವಾಗಿ ಅಸಮಧಾನ ಉಂಟಾಗುವುದು ಸಹಜವೇ ಆಗಿರುತ್ತದೆ. ಆದರೆ ಎಲ್ಲ ಸಂದರ್ಭದಲ್ಲೂ ಮನಸ್ಸನ್ನು ಸ್ಥಿರವಾಗಿ ಇಟ್ಟುಕೊಳ್ಳುವುದು ಬಹಳ ಕಷ್ಟಕರ ಸಂಗತಿಯಾಗಿದೆ. ಆದ್ದರಿಂದ ಮನಸ್ಸಿನ ಸಮಾಧಾನ ಬಹಳ ಅಮೂಲ್ಯವಾದ ಸಂಗತಿಯಾಗಿದೆ. ಯಾವ ಜನರು ಯಾವಾಗಲೂ ಅವಿಶ್ರಾಂತರಾಗಿರುತ್ತಾರೋ, ಅವಿರತವಾಗಿ ಕಾರ್ಯ ನಿರತರಾಗುತ್ತಾರೋ ಮತ್ತು ಜೀವನವನ್ನು ಸಂಪೂರ್ಣವಾಗಿ ಚಿಂತಾಕ್ರಾಂತರಾಗಿ ಕಳೆಯುತ್ತಾರೋ ಅವರಿಗೆ ಮನಸ್ಸಿನ ಸಮಾಧಾನ ಬಹಳ ಮುಖ್ಯವಾಗಿ ಅಗತ್ಯವಾಗಿದೆ. ಅವರು ತಮ್ಮ ಮನಸ್ಸುಗಳನ್ನು ಶಾಂತಿಯಿಂದ ದೃಢ ಮತ್ತು ಬಲಪಡಿಸಿಕೊಳ್ಳಬೇಕಾಗಿದೆ. ಸೂಕ್ಷ್ಮ ಪ್ರವೃತ್ತಿಯ ಜನರು ಯಾವಾಗಲೂ ಮಾನಸಿಕವಾಗಿ ಮತ್ತು ದೈಹಿಕವಾಗಿ ಶಾಂತಿಯಿಂದ ಇರಲು ಪ್ರಯತ್ನಿಸುತ್ತಿರುತ್ತಾರೆ ಮತ್ತು ಭಯದಿಂದ ಹೊರಬರಲು ಪ್ರಯತ್ನಿಸುತ್ತಿರುತ್ತಾರೆ. ಹಾಗಾಗಿ ಶಾಂತಿ ಮತ್ತು ಭದ್ರತೆ ಎರಡೂ ಜೊತೆಯಾಗಿ ಬರುವಂತಹವು ಆಗಿವೆ. ಎಲ್ಲಿ ಶಾಂತಿ, ಸಮಾಧಾನ ಇರುತ್ತದೋ ಅಲ್ಲಿ ಭದ್ರತೆಯ ವಾತಾವರಣ ಇರುತ್ತದೆ, ಎಲ್ಲಿ ಶಾಂತಿ ಸಮಾಧಾನ ಇರುವುದಿಲ್ಲವೋ ಅಲ್ಲಿ ಭಯ, ಅರಾಜಕತೆ, ಅಭದ್ರತೆ ಇರುತ್ತದೆ. ಹಾಗಾಗಿ ನಾವು ಸಮಾಧಾನ ಎಂದರೇನು ಎಂಬುದನ್ನು ಇನ್ನೂ ಸ್ಪಷ್ಟವಾಗಿ ವಿವರವಾಗಿ ತಿಳಿಯೋಣ.

ಶಾಂತಿ ಅಥವಾ ಸಮಾಧಾನ ಎಂದರೇನು?

***ಸಮಾಧಾನವೆಂದರೆ :–***

1. ಭಿನ್ನ ಬಿನ್ನ ಹಕ್ಕುಗಳನ್ನು, ಆಶೆಗಳನ್ನು ಒಂದುಗೂಡಿಸುವುದು
2. ಎರಡು ವಿರುದ್ಧವಾದ ಶಕ್ತಿಗಳನ್ನು ಸಾಮರಸ್ಯಗೊಳಿಸುವುದು
3. ಜಗಳಗಳನ್ನು ಪರಿಹರಿಸುವುದು
4. ಅಂತರವನ್ನು ಕೊನೆಗಾಣಿಸುವುದು ಅಥವಾ ಮುಚ್ಚುವುದು
5. ಹಿಂದೆ ವಿರೋಧಮಾಡಿದ ಸತ್ಯವನ್ನು ಒಪ್ಪಿಕೊಳ್ಳುವುದು – ಆಗಿರಬಹುದು

ಈ ಪ್ರಪಂಚದಲ್ಲಿ ಜನರು ಅನೇಕ ಸೆಳವುಗಳಿಂದ ಸೆಳೆಯಲ್ಪಟ್ಟು ತಮ್ಮ ಹೃದಯವು ಅಸಮಧಾನಗೊಳ್ಳುವಂತೆ ಮಾಡಿಕೊಳ್ಳುತ್ತಾರೆ. ಅವರ ಹೃದಯಗಳು ಬೇರೆಬೇರೆ ರೀತಿಯ ಸೆಳವು(ಪ್ರಲೋಭನೆ)ಗಳಿಗೆ ಒಳಗಾಗಿರುವುದರಿಂದ, ಅವರ ಜೀವನ ಗೊಂದಲವಾಗಿದೆ, ಮತ್ತು ಅಪನಂಬಿಕೆ, ಅಸಮಾಧಾನ ಉಂಟಾಗಿದೆ. ಈ ರೀತಿಯ ಅತಂತ್ರ ಸ್ಥಿತಿಯಿಂದ ಜನರ ಜೀವನದಲ್ಲಿ ''ಭಯ'' ಉಂಟಾಗುತ್ತದೆ.

ಯಾವರೀತಿಯ ಭಯಗಳು ಉಂಟಾಗುತ್ತವೆ ಎಂಬುದನ್ನು ನೋಡುವಾಗ,

1. ಸೋಲುವ ಭಯ,
2. ತಿಳಿಯದಿರುವಿಕೆ,
3. ಭವಿಷ್ಯದ ಬಗ್ಗೆ,
4. ಕೆಟ್ಟದ್ದರ ಬಗ್ಗೆ,
5. ದೌರ್ಜನ್ಯ ಮತ್ತು ಹಿಂಸೆ,
6. ಯುದ್ಧದ ಭಯ,
7. ಏಕಾಂತತೆಯ ಭಯ.

ನಮಗೆ ನಮ್ಮ ಮನಸ್ಸಿನಲ್ಲಿ ಸ್ಥಿರತೆ ಹೊಂದಲು ಸಾಧ್ಯವಾಗದಿರುವುದರಿಂದ ನಾವು ಭಯಗ್ರಸ್ತರಾಗಿ ಎಲ್ಲಾ ವಿಷಯಗಳಲ್ಲಿ ಚಿಂತಿತರಾಗಿದ್ದೇವೆ. ಜೊತೆಗೆ ಮುಂದಿನ ಯಾವ ಸಂಗತಿಗಳ ಬಗ್ಗೆಯೂ ನಿಖರತೆಯಿಲ್ಲದಾಗಿದೆ. ಉದಾರಹರಣೆಗೆ, ಮುಂದಿನ ವರ್ಷದ ಬಗ್ಗೆ, ಬ್ಯಾಂಕಿನ ಬಗ್ಗೆ, ಆರೋಗ್ಯದ ಬಗ್ಗೆ, ಸ್ನೇಹಿತರ ಬಗ್ಗೆ, ನಮ್ಮ ಕೆಲಸದ ಬಗ್ಗೆ ಚಿಂತಿತರಾಗಿ ಮಾನಸಿಕ ಸಮಾಧಾನ ಹೊರಟುಹೋಗಿದೆ. ನಾವುಗಳು ಇದನ್ನೆಲ್ಲಾ ಎದುರಿಸಿ ಈ ಎಲ್ಲವುಗಳಿಂದ ಮೇಲೆ ಬರಬೇಕಾಗಿದೆ.

***ಮುಖ್ಯವಾದ ಮೂಲತತ್ವಗಳು :–***

ಸತ್ಯವೇದದ ಜ್ಞಾನೋಕ್ತಿಗಳ ಪುಸ್ತಕದಲ್ಲಿ ಈ ರೀತಿಯ ಸಮಸ್ಯೆಗಳ ಪರಿಹಾರಕ್ಕೆ ಮುಖ್ಯವಾದ ಮೂಲತತ್ವ ನಿಯಮಗಳನ್ನು ಕೊಡಲಾಗಿದೆ. ಅವುಗಳು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ಬಹಳ ಸಹಕಾರಿಯಾಗಿವೆ. ಆ ನಿಯಮಗಳು ನಮಗೆ ಸಹಾಯಕವಾಗಿ ಇರುವುದರ ಜೊತೆಗೆ, ನಮ್ಮ ಮನಸ್ಸಿಗೆ ಸಮಾಧಾನ ಮತ್ತು ಭದ್ರತೆಯನ್ನು ಕೊಡುತ್ತವೆ ಮತ್ತು ನಮ್ಮನ್ನು ಆತ್ಮೀಕವಾಗಿ ಬಲಪಡಿಸಿ ನಾವು ನಮ್ಮ ಮುಂದಿನ ಜೀವನವನ್ನು ಧೈರ್ಯದಿಂದ ಎದುರಿಸಿ ನಡೆಯುವಂತೆ ಮಾಡುತ್ತವೆ.

ಬಹಳ ಮುಖ್ಯವಾದ ತತ್ವವೊಂದನ್ನು ಜ್ಞಾನೋಕ್ತಿಗಳು 29:18ರಲ್ಲಿ ನೀಡಲಾಗಿದೆ:


‘‘ದೇವದರ್ಶಕರಿಲ್ಲದಿರುವಲ್ಲಿ ಜನರು ಅಂಕೆಮೀರುವರು; ಧರ್ಮೋಪದೇಶವನ್ನು ಕೈಕೊಳ್ಳುವವನೇ ಧನ್ಯನಾಗುವನು’’

ದೇವದರ್ಶಕರಿಲ್ಲದಿರುವಲ್ಲಿ ಜನರು ಅಂಕೆಮೀರುವರು ಎಂಬುದಾಗಿ ಈ ವಾಕ್ಯದಲ್ಲಿ ತಿಳಿಸಲಾಗಿದೆ. ಸತ್ಯವೇದವನ್ನು ಇಬ್ರಿಯ ಭಾಷೆಯಿಂದ ಭಾಷಾಂತರ ಮಾಡಲಾಗಿದೆ, ‘‘ಅಂಕೆಮೀರುವುದು‘‘ ಎಂಬ ಪದದ ಮೂಲಾರ್ಥ ಹತೋಟಿ ತಪ್ಪುವುದು, ನಿಯಯ ಮುರಿಯುವುದು, ಜಾರಿಹೋಗುವುದು ಎಂಬುದಾಗಿದೆ. ಚೂರುಚೂರಾಗಿ ಹೋಗುವುದು ಎಂಬ ಅರ್ಥವೂ ಸಹ ಇದೆ. ಅಂದರೆ ಎಲ್ಲಿ ದರ್ಶನವಿರುವುದಿಲ್ಲವೋ ಅಲ್ಲಿ ಜನರು ಚೂರುಚೂರಾಗಿ ಹೋಗುತ್ತಾರೆ, ಅವರಲ್ಲಿ ಏಕತೆ ಇರುವುದಿಲ್ಲ ಎಂಬುದಾಗಿದೆ.

***ದರ್ಶನದ ಕೊರತೆ :–***

ನಿಯಮ ಮುರಿಯುವುದು ಅಥವಾ ಚೂರುಚೂರಾಗಿ ಹೋಗುವುದು ಎಂಬುದು ಯಾವ ಪರಿಸ್ಥಿತಿಯನ್ನು ತೋರಿಸುತ್ತದೆ ಎಂದರೆ ಶಾಂತಿಗೆ ವಿರುದ್ಧವಾದ ಸ್ಥಿತಿಯಾಗಿದೆ. ಶಾಂತಿ ಅಥವಾ ಸಮಾಧಾನವಿದ್ದಾಗ ಯಾರೂ ನಿಯಮ ಮೀರಲು ಅಥವಾ ಚೂರುಚೂರಾಗಲು




Clipart courtesy FCIT

ಸಾಧ್ಯವಿಲ್ಲ. ನಿಜವಾಗಿ ಹೇಳಬೇಕೆಂದರೆ ಸಮಾಧಾನವಿಲ್ಲವೆಂದರೆ ಅದು ‘‘ಅರಾಜಕತೆ’’ ಆಗಿದೆ. ಎಲ್ಲಿ ಅರಾಜಕತೆ ಉಂಟಾಗುತ್ತದೋ ಅಲ್ಲಿ ಜನರು ಸಮಾಧಾನ ಮತ್ತು ಭದ್ರತೆಯಿಂದ ಜೀವಿಸಲು ಸಾಧ್ಯವಿಲ್ಲ, ಅವರು ಶಾಂತಿ ಮತ್ತು ರಕ್ಷಣೆಯನ್ನು ಕಳೆದುಕೊಳ್ಳುತ್ತಾರೆ. ಇದು ದರ್ಶನದ ಕೊರತೆಯಾಗಿದೆ. ದರ್ಶನ ಎಂದರೆ ಕೇವಲ ನಮ್ಮ ಕಣ್ಣಿಗೆ ಕಾಣಿಸುವುದನ್ನು ‘ನೋಡುವುದು‘ ಮಾತ್ರವಲ್ಲ, ಮುಂದಿನ(ಭವಿಷ್ಯದ) ಸಂಗತಿಗಳನ್ನು ತಿಳಿಯುವ ಅಥವಾ ನೋಡುವ ಸಾಮರ್ಥ್ಯವನ್ನು ‘‘ದರ್ಶನ’’ ಎಂದು ಕರೆಯಲಾಗಿದೆ.

ಯಾರಾದರೂ ನಾನು ಮುಂದಿನ ತಿಂಗಳಿನಲ್ಲಿ ಬರುವ ರಜಾದಿನವನ್ನು ಎದುರುನೋಡುತ್ತಿದ್ದೇನೆ ಎಂದರೆ, ಆತ ಮುಂದಾಗಿ ರಜಾ ದಿನವನ್ನು ನೋಡುತ್ತಿದ್ದಾನೆ ಎಂಬರ್ಥವಾಗಿದೆ.

ಇದನ್ನು ನಾವು ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ– ಆತನಿಗೆ ಮುಂದೆ ಏನೂ ಕಾಣುವುದಿಲ್ಲ ಎಂದರೆ ಆತನಿಗೆ ಮುಂದೆ ನಡೆಯುವ ವಿಷಯಗಳು ತಿಳಿದಿಲ್ಲ ಎಂಬುದಾಗಿದೆ.

ಆದರೆ ಜ್ಞಾನೋಕ್ತಿಗಳು ಪುಸ್ತಕದಲ್ಲಿ ತಿಳಿಸಿರುವ ‘‘ದರ್ಶನ’’ ಎಂಬುದು ಮುಂದಿನ ರಜಾದಿನವನ್ನು ಕುರಿತು ತಿಳಿಸಿಲ್ಲ. ಆದರೆ ಮುಂದೆ ಮುಂದೆ ಬರುವ ಪವಿತ್ರ ದಿನವನ್ನು ಕುರಿತು ತಿಳಿಸಲಾಗಿದೆ. ಅಂದರೆ ದೇವರು ನಿರ್ದಿಷ್ಟವಾಗಿ ಮತ್ತು ನಿಖಕರವಾಗಿ ತನ್ನ ಯೋಜನೆಯನ್ನು ಮಾನವರಿಗೆ ತಿಳಿಸಿದ್ದಾನೆ.

ದೇವರು ತನ್ನ ಬಗ್ಗೆ ಮತ್ತು ಈ ಲೋಕವನ್ನು ಕುರಿತು ತನ್ನ ಯೋಜನೆಗಳನ್ನು ತನಗೆ ವಿಧೇಯರಾದ ಮಾನವರಿಗೆ ವಾಕ್ಯಗಳ ಮೂಲಕ ತಿಳಿಸಿಕೊಟ್ಟಿದ್ದಾನೆ. ಯಾರು ಅವುಗಳನ್ನು (ದೇವರ ವಾಕ್ಯಗಳನ್ನು) ಸರಿಯಾಗಿ ತಿಳಿಯಲು ಪ್ರಯತ್ನಿಸುವಿದಿಲ್ಲವೋ, ಅವರಿಗೆ ದರ್ಶನದ ಕೊರತೆಯಿದ್ದು ಅವರು ಅಶಾಂತಿ ಮತ್ತು ಅಭದ್ರತೆಯಿಂದ ಕೂಡಿದವರಾಗಿದ್ದಾರೆ. ಯಾರು ದೇವರಿಗೆ ವಿಧೇಯರಾಗಿದ್ದು ಆತನ ವಾಕ್ಯಗಳನ್ನು ಸರಿಯಾಗಿ ಕೇಳಿ ಅರ್ಥ ಮಾಡಿಕೊಂಡಿದ್ದಾರೋ ಅವರ ಜೀವನ ದರ್ಶನದಿಂದ ಕೂಡಿದ್ದು ಶಾಂತಿ, ಸಮಾಧಾನ ಮತ್ತು ಭದ್ರತೆಯಿಂದ ಕೂಡಿರುತ್ತದೆ.

***ಸಮುವೇಲನಿಗಾದ ದರ್ಶನ :–***

ಕಟ್ಟಕಡೆಯ ನ್ಯಾಯಸ್ಥಾಪಕರ ಕಾಲದಲ್ಲಿ ಇಸ್ರಾಯೇಲ್ ಜನರು ದೇವರಿಗೆ ವಿರೋಧಿಗಳಾಗಿ ನಡೆದುದರ ಪರಿಣಾಮ ದೇವರು ಮತ್ತು ಇಸ್ರಾಯೇಲ್ಯರ ನಡುವೆ ಸಂಪರ್ಕ ಕಡಿದುಹೋಗಿತ್ತು. ದೈವೋಕ್ತಿಗಳು ಅಥವಾ ದೇವರ ವಾಕ್ಯಗಳು ವಿರಳವಾಗಿದ್ದವು. ಈ ವಿಷಯವಾಗಿ ಸಮುವೇಲನ ಪುಸ್ತಕದಲ್ಲಿ ತಿಳಿಸಲಾಗಿದೆ. ಶಿಲೋವದಲ್ಲಿ ದೇವರ ಪರಿಶುದ್ಧ



ಸ್ಥಳದಲ್ಲಿ ಸಮುವೇಲ ಸೇವೆ ಮಾಡುತ್ತಿರುವ ಸಮಯದಲ್ಲಿ ನಡೆದ ವಿಷಯವನ್ನು ತಿಳಿಸಿಕೊಡುತ್ತದೆ.

''ಬಾಲಕನಾದ ಸಮುವೇಲನು ಏಲಿಯ ಕೈಕೆಳಗಿದ್ದುಕೊಂಡು ಯೆಹೋವನ ಸೇವೆ ಮಾಡುತ್ತಿದ್ದನಷ್ಟೆ; ಆ ಕಾಲದಲ್ಲಿ ದೇವೋಕ್ತಿಗಳು ವಿರಳವಗಿದ್ದವು; ದೇವದರ್ಶನಗಳು ಅಪರೂಪವಾಗಿದ್ದವು. ಏಲಿಯ ಕಣ್ಣುಗಳು ದಿನದಿನಕ್ಕೆ ಮೊಬ್ಬಾಗುತ್ತಾ ಬಂದು ಚೆನ್ನಾಗಿ ಕಾಣದೆ ಹೋಗಿದ್ದವು. ಇವನು ಒಂದಾನೊಂದು ರಾತ್ರಿ ತನ್ನ ಸ್ಥಳದಲ್ಲಿ ಮಲಗಿದ್ದನು; ಸಮುವೇಲನು ಯೆಹೋವನ ಮಂದಿರದಲ್ಲಿ ದೇವರ ಮಂಜೂಷವಿದ್ದ ಸ್ಥಳದಲ್ಲಿ ಮಲಗಿದ್ದನು. ಆಗ ದೇವದೀಪವು ಇನ್ನೂ ಉರಿಯುತ್ತಿರುವಾಗಲೇ ಯೆಹೋವನು ಸಮುವೇಲನನ್ನು ಕರೆದನು; ಸಮುವೇಲನು ಬಂದನೆಂದು ಉತ್ತರ ಕೊಟ್ಟನು'' (1ಸಮುವೇಲ 3:1–4).

ಈ ಸಂದರ್ಭದಲ್ಲಿ ಮಾನವರಿಗೂ ಮತ್ತು ದೇವರಿಗೂ ಸಂಪರ್ಕ ಕಡಿದುಹೋಗಿತ್ತು, ಈ ಸಂಪರ್ಕ ಯಾವುದರ ಮೂಲಕ ಬೆಸೆಯಬೇಕು ಎಂಬುದನ್ನು ಗುರುತಿಸಿದ್ದೀರಾ? ದೇವೋಕ್ತಿಗಳು ಅಂದರೆ ದೇವರ ವಾಕ್ಯಗಳು ವಿರಳವಾಗಿದ್ದವು, ದರ್ಶನಗಳು ಅಪರೂಪವಾಗಿದ್ದವು. ಅಂದರೆ ದೇವರ ವಾಕ್ಯಗಳು ಜನರಿಗೆ ಇಲ್ಲವಾಗಿದ್ದವು, ಅಂದರೆ ಸಂಪರ್ಕವಿಲ್ಲ. ದೇವರ ವಾಕ್ಯಗಳು ಬಹಳ ಅಮೂಲ್ಯವಾದವುಗಳು ಅವುಗಳು ನಮ್ಮಲ್ಲಿದ್ದರೆ ನಾವು ದೇವರೊಟ್ಟಿಗೆ ಸಂಪರ್ಕದಲ್ಲಿದ್ದೇವೆ ಎಂಬುದನ್ನು ತಿಳಿಸಿಕೊಡುತ್ತದೆ.

ಆದ್ದರಿಂದ ನಾವುಗಳು ದೇವರ ವಾಕ್ಯಗಳನ್ನು ತಿರಸ್ಕಾರ ಮಾಡಿದರೆ ನಾವು ದೇವರನ್ನೇ ತಿರಸ್ಕರಿಸಿದಂತೆ ಮತ್ತು ನಮಗೂ ದೇವರಿಗೂ ಸಂಪರ್ಕ ಕಡಿದುಹೋಗಿ ನಮಗೆ ಸಮಾಧಾನ ಮತ್ತು ಭದ್ರತೆ ಇಲ್ಲದೆ ನಾಶವಾಗಿ ಹೋಗುತ್ತೇವೆ. ಅದಕ್ಕೆ ಬದಲಾಗಿ ನಮ್ಮಲ್ಲಿ ದೇವರ ವಾಕ್ಯಗಳು ಇದ್ದರೆ ನಾವು ದರ್ಶನದ ಕೊರತೆಯುಳ್ಳವರು ಆಗಿರುವುದಿಲ್ಲ, ನಾವು ದೇವರ ವಾಕ್ಯಭರಿತರಾಗಿ ಶಾಂತಿ, ಸಮಾಧಾನ ಮತ್ತು ರಕ್ಷಣೆಯನ್ನು ಹೊಂದಬಹುದಾಗಿದೆ.



# ಮುಳುಗಿಹೋದ ವಿವಾದ

## “ಸುಮ್ಮನೆ ನಿಂತು ದೇವರ ಅದ್ಭುತ ಕಾರ್ಯಗಳನ್ನು ಧ್ಯಾನಿಸು”



ಪ್ಲಾಟಿಪಸ್ ಎಂಬುದು ಸಸ್ತನಿ ವರ್ಗಕ್ಕೆ ಸೇರಿದ ಜೀವಿಯಾಗಿದೆ. ಆದರೆ ಇದಕ್ಕೆ ಬಾತುಕೋಳಿಯಂತಹ ಕೊಕ್ಕು ಇದೆ, ಆದರೆ ಇದರ ಬಾಲ ನೀರುನಾಯಿಯಿಂದ ಎರವಲು ಪಡೆದ ಹಾಗಿದೆ. ಇದರ ವಿಶೇಷತೆ ಅಷ್ಟಕ್ಕೇ ನಿಲ್ಲುವುದಿಲ್ಲ, ಇದು ತನ್ನ ಮರಿಗಳಿಗೆ ಸಸ್ತನಿಗಳಂತೆ ಹಾಲೂಡಿಸುತ್ತದೆ, ಆದರೆ ಮರಿಹಾಕುವುದಕ್ಕೆ ಬದಲಾಗಿ ಸರೀಸೃಪಗಳ ರೀತಿಯಲ್ಲಿ ಮೊಟ್ಟೆ ಹಾಕುತ್ತದೆ! ಜೊತೆಗೆ ಆಹಾರವನ್ನು ಶೇಖರಿಸಲು ಬಾಯಿಚೀಲವನ್ನು ಹೊಂದಿದೆ. ಅದರ ಹಿಂದಿನ ಕಾಲಿನಿಂದ ಹಾವಿನ ರೀತಿಯಲ್ಲಿ ವಿಷಕಾರುತದೆ. ಎಂತಹ ಹೊಂದಾಣಿಕೆ ಅಲ್ಲವೇ?



ಇದನ್ನು ನೋಡಿದಾಗ ಪ್ರಾಣಿ, ಪಕ್ಷಿ, ಸರೀಸೃಪಗಳ ಸರಿಸಮನಾದ ಹೊಂದಾಣಿಕೆಯಂತೆ ಕಾಣಿಸುತ್ತದೆ. ಎಲ್ಲಸರಿ, ಆದರೆ ವಿವಾದ ಏನು ಎಂದರೆ ''ಸೃಷ್ಟಿಯಾಗಿದೆ'' ಸೃಷ್ಟಿಕರ್ತ ತನ್ನ ಸೃಷ್ಟಿಕಾಲದಲ್ಲಿ ಈ ಪ್ರಾಣಿಯನ್ನು ಸೃಷ್ಟಿಸುವಾಗ ಪ್ರಾಣಿ, ಪಕ್ಷಿ, ಹಾವು ಎಲ್ಲವುಗಳ ಅಂಶಗಳನ್ನು ಸೇರಿಸಿ ಈ ಜೀವಿಯನ್ನು ಸೃಷ್ಟಿಸಿರುವುದು ಕಂಡುಬರುತ್ತದೆ. ಏಕೆಂದರೆ ಎಲ್ಲವನ್ನೂ ಸೃಷ್ಟಿಸಿರುವವನು ಆತನೇ ಆಗಿರುವುದರಿಂದ ಯಾವುದನ್ನು ಹೇಗೆ ಹೊಂದಿಸಬೇಕು ಎಂಬುದು ಆತನಿಗೆ ತಿಳಿದಿದೆ ಎಂಬುದಾಗಿದೆ. ಪ್ಲಾಟಿಪಸ್ ಎಂತಹ ಆಶ್ಚರ್ಯವಲ್ಲವೇ?

# ಬಿತ್ತುವವನು

ಪರಿಸಾಯರೂ ಶಾಸ್ತ್ರಿಗಳೂ "ಒಬ್ಬನನ್ನು ತಮ್ಮ ಮತದಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಭೂಮಿಯನ್ನು ಸಮುದ್ರವನ್ನೂ ಸುತ್ತಿಕೊಂಡು ಬರುವವರು" (ಮತ್ತಾಯ 23:15) ಎಂದು ಅವರ ಬಗ್ಗೆ ತಿಳಿಸಲಾಗಿದೆ.

ಕ್ರಿಸ್ತನ ಸಮಯದಲ್ಲಿ ಈ ಪರಿಸಾಯರು ದೇವರ ವಾಕ್ಯವನ್ನು ಬಿತ್ತಿದ್ದರು ಜೊತೆಗೆ ಅವರು ರೋಮಾ ರಾಜ್ಯದ ಪ್ರತಿ ಮೂಲೆಯಲ್ಲೂ ಟಾಲ್ಮುಡ್ ಅನ್ನೂ ಬಿತ್ತಿದ್ದರು. ಟಾಲ್ಮುಡ್ ಎಂದರೆ ಯೆಹೂದ್ಯರ ಬಾಯಿನುಡಿಯ ನ್ಯಾಯಪ್ರಮಾಣ ಹಾಗೂ ಕ್ರಿ.ಪೂ 5ನೇ ಶತಮಾನದ ಬ್ಯಾಬಿಲೋನಿಯಾ ಸೆರೆಯ ಕಾಲದ ರಬ್ಬೂನಿಗಳ ಬೋಧನೆಗಳನ್ನು ಒಳಗೊಂಡ ಬರಹಗಳ ಸಂಗ್ರಹ. ಟಾಲ್ಮುಡ್‌ಗಳಲ್ಲಿ ಮಿಶ್ನಾ ಎಂಬ ಬಾಯಿನುಡಿಯ ನ್ಯಾಯಪ್ರಮಾಣವೂ, ಗೆಮಾರ ಎಂಬುದರಲ್ಲಿ ಮಿಶ್ನಾದ ವೀಕ್ಷಕ ವಿವರಣೆಯನ್ನು ಒಳಗೊಂಡ ಎರಡು ಭಾಗವಿದೆ. ಎರಡೂ ಯೇಸುಕ್ರಿಸ್ತನ ಸಮಯಕ್ಕೆ ಬಹಳವಾಗಿ ಸೇರಿದ್ದಾಗಿದ್ದು ಕ್ರಿ.ಶ 6ನೇ ಶತಮಾನದ ಲೇಖನವಾಗಿದೆ.

***ವಿಚಾರವಾದಿ ಜನರಿಗೆ ಯೆಹೂದ ಮತವು ಆಕರ್ಷಣೀಯವಾದದ್ದು:–***

ಎಪಿಫೆನಸ್ ಎಂದುಕರೆಯಲ್ಪಡುವ ಆಂಟಿಯೋಕನ(ಕ್ರಿ.ಪೂ 175–164) ಆಳ್ವಿಕೆಯ ಹಿಂಸೆಗಳಲ್ಲಿ ಅನೇಕ ಯೆಹೂದ್ಯರನ್ನು ಪಾಲೆಸ್ತೀನದಿಂದ ಹೊರಡಿಸಿಬಿಟ್ಟಿದ್ದನು. ಈ ಸ್ಥಳಾಂತರದ ಪರಿಣಾಮವಾಗಿ ಅನ್ಯಜನಗಳ ಪ್ರಪಂಚದಲ್ಲಿ ಅಸಂಖ್ಯ ವಸಹಾತುಗಳೂ, ಯೆಹೂದ್ಯರ ಮಂದಿರಗಳೂ ಉಂಟಾದವು. ಯೆಹೂದ ಮತವು ವಿದ್ಯಾವಂತರ ಅನ್ಯಜನಗಳ ಪ್ರಪಂಚದಲ್ಲಿ ಬಹಳ ಖ್ಯಾತಿಗೊಂಡಿತು. ತೋರಾ(ಮೋಶೆಯಿಂದ ಬರೆಯಲ್ಪಟ್ಟ ಹಳೆಯ ಒಡಂಬಡಿಕೆಯ ಮೊದಲ ಐದು ಪುಸ್ತಕಗಳ ಇಬ್ರಿಯ ವರ್ಣನೆ)ವನ್ನು ಓದುವುದರಿಂದ ಅನೇಕ ಜನರು ಒಬ್ಬನೇ ದೇವರು ಮಾನವರೊಂದಿಗೆ ಮಾಡುತ್ತಿರುವ ಕೃತ್ಯಗಳ ಕುರಿತಾದ ಉನ್ನತಕುಲ ತತ್ವಗಳೂ, ವಿಚಾರಬದ್ಧ, ತರ್ಕಶಾಸ್ತ್ರಾನುಸಾರ ವಿವರಣೆಗಳನ್ನೂ ಕಂಡುಕೊಂಡರು. ಇದು ಅನೇಕಾನೇಕ ದೇವರುಗಳ ಹಾಗೂ ಭ್ರಷ್ಟಾಚಾರ ಅಭ್ಯಾಸಗಳನ್ನೊಳಗೊಂಡ ವಿಧರ್ಮ ಮತಗಳಿಗಿಂತ ಬಹಳ ವ್ಯತ್ಯಾಸವುಳ್ಳದ್ದು.

ಮತಾಂತರ ಹೊಂದಿದವರೆಂದೂ, ಪರಮತಾವಲಂಬಿಗಳೆಂದೂ ಮುಖ್ಯ ಎರಡು ಬಗೆಯ ಪಂಗಡಗಳನ್ನು ಯೆಹೂದ್ಯರು ಗುರುತಿಸುತ್ತಾರೆ. ಮೊದಲನೆಯದು "ನೀತಿಯ ಪರ ಮತಾವಲಂಬಿ" ಈ ಸ್ಥಿತಿ ಎಂದರೆ ಅನ್ಯರು ಪರಿಪೂರ್ಣ ಮತಾಂತರ ಹೊಂದಿ, ಮೋಶೆಯ ಧರ್ಮಪ್ರಮಾಣವನ್ನು ಅದರ ಎಲ್ಲಾ ಸಂಸ್ಕಾರ ಪದ್ಧತಿ, ಆಚರಣೆ ಹಾಗೂ ಸುನ್ನತಿಯನ್ನೂ ಮಾಡಿಸಿಕೊಂಡವರು. ಅಂತಿಯೊಕ್ಯದ ನಿಕೊಲಾಯನು ಇಂತಹ ಮತಾಂತರ ಹೊಂದಿದವನು. ಇನ್ನೊಂದು ಬಗೆಯ ಮತಾಂತರ ಹೊಂದಿದವರೆಂದರೆ ಅವರು 'ಹೆಬ್ಬಾಗಿಲ ಬಳಿಯ ಪರಮತಾವಲಂಬಿಗಳು', ಅಂದರೆ ಅವರು ಬಾಗಿಲ ಬಳಿ ನಿಂತಿರುವವರೆಂಬ ಅರ್ಥವುಳ್ಳದ್ದು. ಅಂದರೆ ಅವರು ಯೆಹೂದ್ಯರ ಆಲಯಗಳೊಳಗೆ ಪೂರ್ಣಪ್ರವೇಶವಿಲ್ಲದ, ಅವರೊಟ್ಟಿಗೆ ಐಕ್ಯಹೊಂದಲಾರದೆ ಇರುವವರು. ಇವರು ಧರ್ಮಶಾಸ್ತ್ರದ ಕೆಲವು ಭಾಗಗಳನ್ನು



ಅನುಸರಿಸುವವರು. ನೋಹನ ಒಡಂಬಡಿಕೆಗೆ ಮಾತ್ರ ಮುಖ್ಯ ಚಂದಾದಾರರಾಗಿವುವವರು (ಆದಿಕಾಂಡ 9:1–7) ಅವರು ಸುನ್ನತಿಗೆ ತಮ್ಮನ್ನು ಒಪ್ಪಿಸಿಕೊಡದವರು.

ಯೆಹೂದ ಮತದ ಆಕರ್ಷಣೆಯು ಫರಿಸಾಯರನ್ನೂ ಶಾಸ್ತ್ರಿಗಳನ್ನೂ ಅನ್ಯದೇವತೆಗಳನ್ನು ಆರಾಧಿಸುತ್ತಿದ್ದ ರೊಮನ್ನರ ಮಧ್ಯೆ ಮಿಷನರಿ ಕೆಲಸ ಮಾಡುವಂತ ಆಸಕ್ತಿ ಬಹಳ ಹೆಚ್ಚಿಸಿತು. ರೋಮನ್ನರ ಬಲದ ಉಗಮವಾದ ಪ್ಯಾಕ್ಸ್ ರೋಮಾನ ಎಂಬಲ್ಲಿಂದ ಕ್ರಿಸ್ತನ ಸಮಯದಲ್ಲಿ ಸುರಕ್ಷತೆ ಮತ್ತು ಪ್ರಯಾಣದ ಅನುಕೂಲತೆಯ ಯುಗವಾಗಿ ಮಿಷನರಿಗಳು ತಮ್ಮ ಕೆಲಸ ನಡೆಸಲು ಸುಗಮವಾಗಿತ್ತು. ಅದು ಪೌಲನ ಹಾಗೂ ಇತರ ಅಪೊಸ್ತಲರು ಈ ಹಿಂದಣ ಯೆಹೂದ ತಳಹದಿಯ ಮೇಲೆಯೇ ಕಟ್ಟಡ ಕಟ್ಟಿದರೆನ್ನಬಹುದು. ರೊಮಾಯದಲ್ಲಿನ ಯೆಹೂದ ಸಭಾಮಂದಿರಗಳೇ ಪೌಲನು ಸಂಧಿಸಿದ ಹೊಸ ಪಟ್ಟಣಗಳಲ್ಲಿನ ಸ್ಥಳಗಳು. ಒಂದುವೇಳೆ ಹೆಬ್ಬಾಗಿಲ ಬಳಿಯ ಪರಮತಾವಲಂಬಿಗಳನ್ನೇ ಪೌಲನು ಕ್ರಿಸ್ತನ ಮಾರ್ಗಕ್ಕೆ ಪರಿವರ್ತನೆ ಪಡಿಸಿದ್ದರಬಹುದು.

ಬೀಜ ಬಿತ್ತುವವನ ಸಾಮ್ಯವನ್ನು (ಮತ್ತಾಯ 13:3–24) ಯೇಸುಕ್ರಿಸ್ತ ಜನಸ್ತೋಮಕ್ಕೆ ಬೋಧಿಸಿದಾಗ, ಜನಸ್ತೋಮವು ಫರಿಸಾಯರ ಹಾಗೂ ಶಾಸ್ತ್ರಿಗಳಿಗಿಂತ ಭಿನ್ನವಾಗಿ ಬೋಧಿಸುತ್ತಿದ್ದದ್ದನ್ನು ಕೇಳಿದರು. ಆಗ ಅವರು ನಮ್ಮ ಕರ್ತನಾದ ಯೇಸು ಹೇಳಿದ ಈ ಎರಡು ಸಾಮ್ಯಗಳ ಬಲವಾದ ತತ್ವಗಳನ್ನು, ಹೇಗೆ ದೇವರ ವಾಕ್ಯಗಳನ್ನು ಪ್ರಸಂಗಿಸ ಬೇಕೆಂಬ ರೀತಿಯನ್ನು ಕಲಿಯಬೇಕಿತ್ತು.

ತಮ್ಮನ್ನು ರೋಮನ್ನರ ಆಳ್ವಿಕೆಯಿಂದ ಬಿಡಿಸಿ ತಮ್ಮ ದೇಶವನ್ನು ಮತ್ತೊಮ್ಮೆ ಬಿಡುಗಡೆ ಮಾಡುವ ಒಬ್ಬ ಮೆಸ್ಸೀಯನಿಗಾಗಿ ಆ ಜನಸ್ತೋಮವು ಕಾದಿತ್ತು. ತಾವು ನಿರೀಕ್ಷಿಸುತ್ತಿದ್ದ ಮೆಸ್ಸೀಯನ ಮೂಲಕ ತಮ್ಮ ದೇಶವನ್ನು ಉನ್ನತಿಗೂ ಮಹಿಮೆಗೂ ನಡೆಸುವನೆಂದು ಇಸ್ರಾಯೇಲ್ ಜನರು ನಿರೀಕ್ಷಿಸುತ್ತಿದ್ದರು. ಅವರ ನಂಬಿಕೆಯು ಆತ್ಮೀಯ ನಿರೀಕ್ಷೆಯಾಗದೆ ರಾಜಕೀಯವಾಗಿತ್ತು. ಕರ್ತನು ಎಲ್ಲಾ ದೇಶ, ಗೋತ್ರ ಮತ್ತು ಭಾಷೆಗಳವರನ್ನು ಒಂದುಸೇರಿಸಿ ಈ ಬಹುಕಾಲದಿಂದ ಕಾದಿದ್ದ ಕಾರ್ಯವು ಹೊರಬೀಳುವಂತೆ ಮಾಡುವನೆಂದು ನಂಬಿದ್ದರು. ಬಿತ್ತುವವನ ಸಾಮ್ಯದಲ್ಲಿ ನಮ್ಮ ಕರ್ತನು ಕರೆಯುವ ಸ್ವಭಾವ(ರೀತಿ) ಹಾಗೂ ಮಾನವರ ಪ್ರತಿಕ್ರಿಯೆಯ ಪರಿಮಿತಿಯನ್ನು ವರ್ಣಿಸಲಾಗಿದೆ.

***ವಾಕ್ಯದ ಕ್ರಮವಲ್ಲದ ಬಿತ್ತುವಿಕೆ :–***

ಆ ಬಿತ್ತುವವನು ಬೀಜವನ್ನು ಅನೇಕ ರೀತಿಯ ಅಂದರೆ ವಿವಿಧ ರೀತಿಯ ಮಣ್ಣಿನಲ್ಲಿ ಹರಡುತ್ತಾನೆ. ಜೀವಿತದ ನಿಜ ಚಿತ್ರಣವಿದು, ನಮ್ಮ ಕರ್ತನ ಕಾಲದಲ್ಲಿ ರೈತರು(ಬಿತ್ತುವವರು) ತಮ್ಮ ಹೆಗಲಮೇಲೆ ಬೀಜ ತುಂಬಿದ ಚೀಲವನ್ನು ಹೊತ್ತು ಮತ್ತೊಂದು ಕೈಯಿಂದ ಬೀಜವನ್ನು ಬಿತ್ತುತ್ತಾರೆ. ಧನಿಕ ರೈತನು ಸಣ್ಣ ತೂತಿರುವ(ರಂಧ್ರ) ಚೀಲದಲ್ಲಿ ಬೀಜವನ್ನು ತುಂಬಿ ತನ್ನ ಆಕಳಿನ ಮೇಲೋ ಅಥವಾ ಯಾವುದಾದರು ಸಾಕುಪ್ರಾಣಿಯ ಮೇಲೋ ಇರಿಸಿ ಅದನ್ನು ತನ್ನ ಉಳುಮೆ ಮಾಡಿರುವ ಹೊಲದಲ್ಲಿ ಅತ್ತಿತ್ತ ಸುತ್ತಲು ತಿರುಗಿಸುತ್ತಾನೆ.

***ಯೆಹೂದ್ಯರ ಬಿತ್ತುವ ರೀತಿಯ ಆಯ್ಕೆ :–***

ಫರಿಸಾಯರೂ ಶಾಸ್ತ್ರಿಗಳೂ ಬಿತ್ತುವ(ವಾಕ್ಯಸಾರುವ) ರೀತಿಯನ್ನು ನೋಡುವುದಾದರೆ, ಚರಿತ್ರಕಾರರ ಪುರಾವೆಯು ಫರಿಸಾಯರ ಹಾಗೂ ಶಾಸ್ತ್ರಿಗಳ ಪ್ರಯತ್ನಗಳು ಪೂರ್ಣ ಬದಲಾವಣೆಯಿಂದ ಕೂಡಿದ್ದವು. ರಬ್ಬೂನಿಗಳ ಸಲಹೆಯಂತೆ ದೇವರ ರಹಸ್ಯಗಳು, ಯಾರು ಪರಿಶುದ್ಧ ಜೀವಿತವನ್ನು ನಡೆಸಿ ಧರ್ಮಶಾಸ್ತ್ರ ನಿಪುಣರಾಗಿದ್ದಾರೋ ಅವರಿಗೆ ಮಾತ್ರ ತಿಳಿಸಲ್ಪಡುವುದೆಂದು ತಿಳಿದಿದ್ದರು. ಫರಿಸಾಯರ ಮತ್ತು ಶಾಸ್ತ್ರಿಗಳ ಅಭಿಪ್ರಾಯದಂತೆ ಯಾರು ತಮ್ಮ ಬೋಧನೆಗಳನ್ನು ಕೇಳಬೇಕೆಂಬುದರ ಕುರಿತಾದ ಕಥೆಯೊಂದು ಇಬ್ರಿಯ ಗುರುಗಳೊಂದರಲ್ಲಿದೆ. ಗೃಹಣಿಯೊಬ್ಬಳನ್ನು ಹಣವಂತ ಅಥವಾ ಬಡವ ಇವರಿಬ್ಬರಲ್ಲಿ ಯಾರಿಗೆ ಸಾಲ ಕೊಡಬಹುದು ಎಂಬ ಪ್ರಶ್ನೆಯನ್ನು ಕೇಳಲಾಯಿತು, ಅವಳ ಉತ್ತರ– "ಹಣವಂತನಿಗೆ". ಕಾರಣ ಅವನು ಅದನ್ನು ಬಳಸಿದರೂ ಹಿಂತಿರಿಗಿ ಕೊಡಲು ಅವನಲ್ಲಿ ಹಣವಿರುತ್ತದೆ. ಅಂತೆಯೇ ದೇವರು ಸಹ ಮೂಢರಿಗೆ, ಯಾರು ಅದನ್ನು ವ್ಯರ್ಥವಾಗಿ ಕಳೆಯುವುದಿಲ್ಲವೋ ಅವರಿಗೆ ಜ್ಞಾನವನ್ನು ಕೊಡುವುದಿಲ್ಲ, ಆದರೆ ತಮ್ಮ ವಿದ್ಯೆಯಲ್ಲಿ ಖರ್ಚು ಮಾಡುವ ಬೋಧಕರಿಗೆ ಕೊಡುತ್ತಾನೆ ಎಂದಳು.

ಹಣವಂತನಿಗೇ ಸಾಲಕೊಡುವುದು ಒಂದು ವಿಕಟ ಕವಿತ್ವದಂತೆ. ಆದರೆ ಅದನ್ನು ನಮ್ಮ ಪೀಳಿಗೆಯಲ್ಲಿ ರಾಜ್ಯಭಂಡಾರ ರಾಜನೀತಿಯಂತೆ ಅಂಗೀಕರಿಸಲ್ಪಟ್ಟಿದೆ. ಯಾರಾದರೂ ಮೊದಲ ತನ್ನ ಮನೆಯನ್ನು ಕೊಂಡುಕೊಳ್ಳುವುದಕ್ಕೂ ಅಥವಾ ಮೊದಲ ದೊಡ್ಡ ಸಾಲ ತೆಗೆದುಕೊಳ್ಳಲಿಕ್ಕೂ ಕೈಯಿಟ್ಟಿದ್ದರೆ ಇದರ ಅರ್ಥವನ್ನು ತತ್ವವನ್ನು ಅರ್ಥಮಾಡಿಕೊಳ್ಳಬಹುದು. ಮೊದಲನೆಯದಾಗಿ ನೀವು ಅವುಗಳನ್ನು ಹೊಂದಲು ಸಾಲವನ್ನು ಪಡಕೊಳ್ಳ ಅಗತ್ಯವಿಲ್ಲವೆಂಬುದನ್ನು ನಿಮಗೆ ರುಜುವಾತುಪಡಿಸಿಕೊಳ್ಳಬೇಕು. ಆದರೆ ದೇವರ ವಾಕ್ಯವು ಹಾಗಲ್ಲ್, ಅದು ಹಣವಂತನಾದರೂ, ಬಡವನಾದರೂ, ಯಾವ ಕುಲ, ಜನಾಂಗ, ಭಾಷೆ, ಲಿಂಗ ಮತ್ತು ವಯಸ್ಸಿನವರಾದರೂ ಉಚಿತವಾಗಿ ಕೊಡಲ್ಪಡುತ್ತದೆ.

"ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ. ನೀವೆಲ್ಲರೂ ಕ್ರಿಸ್ತನಲ್ಲಿ ಒಂದೇ ಆಗಿರುವುದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ. ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ"(ಗಲಾತ್ಯದವರಿಗೆ 3:26–29).

ದೇವರು ಮಾತ್ರವೇ ಅಧಿಕವಾಗಿ ಕೊಡುವಾತನೆಂಬುದನ್ನು ನಾವು ಎಂದಿಗೂ ಮರೆಯಬಾರದು.

"ನಾನು ಸಸಿಯನ್ನು ನೆಟ್ಟೆನು, ಅಪೊಲ್ಲೋಸನು ನೀರುಹೊಯಿದನು, ಆದರೆ ಬೆಳೆಸುತ್ತಾ ಬಂದವನು ದೇವರು. ಹೀಗಿರಲಾಗಿ ನೆಡುವವನಾಗಲೀ, ನೀರುಹೊಯ್ಯುವವನಾಗಲೀ ವಿಶೇಷವಾದವನಲ್ಲ, ಬೆಳಸುವ ದೇವರೇ ವಿಶೇಷವಾದವನು" (1ಕೊರಿಂಥ 3:6–7).



***ನೆಲವು ವಿಮರ್ಶಾತ್ಮಕವಾದದ್ದು :–***

ಒಮ್ಮೆ ಬೀಜ ಬಿತ್ತಿದರೆ ಬೇರೆಲ್ಲವೂ ಅದರ ನೆಲದ ಯೋಗ್ಯತೆಗೆ ತಕ್ಕಂತಿರುತ್ತದೆ. "ಕಾಣುವ ನಿಮ್ಮ ಕಣ್ಣುಗಳೂ, ಕೇಳುವ ನಿಮ್ಮ ಕಿವಿಗಳು ಧನ್ಯವಾದವುಗಳು" ಇವುಗಳು ನಮ್ಮ ವಿಷಯದಲ್ಲಿಯೂ ಹೇಳಲ್ಪಡಬೇಕು. ಅಲ್ಲದಿದ್ದರೆ ವಾಕ್ಯವು ಬೇರೂರುವುದಿಲ್ಲ, ನಾವು ಬದುಕಿರುವವರೆಗೂ ಇವು ಹೇಳಲ್ಪಡಬೇಕು(ಯೇಸು ಬೋಧಿಸಿದ ವಾಕ್ಯವು ಪೂರ್ವ ನಿರ್ಣಯ ಮಾಡಿದ ಅಭಿಪ್ರಾಯವಾಗಿದೆ). ನೆಲವು ವಾಕ್ಯವೆಂಬ ಬೀಜವನ್ನು ಗ್ರಾಹಕ 'ಹೃದಯ ಮತ್ತು ಮನಸ್ಸಿನಿಂದ'ಅಂಗೀಕರಿಸುತ್ತದೆ. ಕಷ್ಟವೇನೆಂದರೆ ಯಾವ ಗಿಡವನ್ನು ನೆಡುವಾಗಲಾದರೂ ಒಬ್ಬ ರೈತನು ಅದನ್ನು ಸಂರಕ್ಷಿಸಿ ನಮ್ಮ ಆತ್ಮೀಯ ಅಗತ್ಯಗಳನ್ನು ಪೂರೈಸಬೇಕು.

"ಆದರೆ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ ಆತನಿಗೆ ಸ್ತೊತ್ರ" (1ಕೊರಿಂಥ 15:57).

ಒಬ್ಬ ರೈತನು ಒಂದು ಬೀಜವನ್ನು ಉದಾಸೀನ ಮಾಡುವುದಾದರೆ ಅದರ ಬೆಳವಣಿಗೆ ಕೆಟ್ಟು ಆರೋಗ್ಯವಾದ ಗಿಡವು ಬೆಳೆಯಲಾರದಂತೆ ನಾವೂಸಹ ನಮ್ಮಿಂದ ಏನೂ ಮಾಡಲಾಗದು, ನಮ್ಮ ಭಾಗವನ್ನು ನಾವು ಮಾಡಬೇಕು.

***ದಾರಿಯ ಪಕ್ಕದಲ್ಲಿ ಬಿದ್ದ ಬೀಜ :–***



ದಾರಿ ಪಕ್ಕದಲ್ಲಿ ಬಿದ್ದ ಬೀಜವನ್ನು ಕುರಿತು– ವಾಕ್ಯವು ನಮ್ಮ ಮನಸ್ಸಿನೊಳಗೆ ಹೊಕ್ಕರೂ ನಮ್ಮ ಅಸ್ಥಿತ್ವದೊಳಕ್ಕೆ ಮಾರಿಹೋಗದು ಉದ್ದೇಶವು ಆಸಕ್ತಿಯುಳ್ಳದ್ದಾಗಿರಬಹುದು, ನಾವು ಸಹ ಅದಕ್ಕೆ ಸ್ವಲ್ಪಕಾಲ ಒಡಂಬಡಬಹುದು ಆದರೆ ಲೋಕದ ಕಾರ್ಯವು ನಮಗೆ ಬಹಳ ಮುಖ್ಯವಾದದ್ದು. ನಾವು ವಾಕ್ಯವು ನಮ್ಮೊಳಗೆ ಬೇರೂರಲು ಲೋಕದ ದುಷ್ಟ ಕಾರ್ಯಗಳು ನಮ್ಮನ್ನು ಮೋಸಗೊಳಿಸದಂತೆ ದೇವರ ಕಾರ್ಯದಿಂದ ಅದನ್ನು ದೂರವಿರಿಸಬೇಕು. ದೇವ ಬೋಧನೆಗಳಿಗಿಂತ ನಮಗೆ ಲೋಕದ ಗೆಳೆಯರು ವಿಶೇಷವಾಗುವುದರಿಂದ ನಾವು ಬಾಡಿಹೋಗುತ್ತೇವೆ. ಒಬ್ಬನು



ಲೋಕಕ್ಕೆ ಗೆಳೆಯನಾಗಿಯೂ, ಯೇಸುಕ್ರಿಸ್ತನಿಗೆ ಸಹೋದರನಾಗಿಯೂ ಇರಲು ಅಸಾಧ್ಯ.

"ಯಾವನೂ ಇಬ್ಬರು ಯಜಮಾನರಿಗೆ ಸೇವೆಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು; ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರ ಮಾಡುವನು. ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ" (ಮತ್ತಾಯ6:24).

***ಬಂಡೆಯ ನೆಲದಲ್ಲಿ ಬಿದ್ದ ಬೀಜ :–***

ಬಂಡೆಗಳ ಬಿರುಕುಗಳಲ್ಲಿ ನೀರು ನಿಲ್ಲಬಹುದಾದ್ದರಿಂದ ಅಲ್ಲಿ ಬಿದ್ದ ಬೀಜಗಳು ಬೇಗನೆ ಮೊಳೆಯುತ್ತವೆ. ತೆಳ್ಳಗಿರುವ ಆ ನೆಲದಲ್ಲಿ ಅಧಿಕ ಲವಣಗಳಿಲ್ಲದಿರುವುದರಿಂದ ಬೇಗ ಮೊಳೆತಂತೆಯೇ ಅವು ಬೇಗನೇ ಬಾಡಿಹೋಗುತ್ತವೆ. ಅದರಂತೆಯೇ ವಾಕ್ಯಗಳಿಗಾಗಿ ಒಬ್ಬನು ತಾನು ಅನುಭವಿಸಬೇಕಾದ ಕಷ್ಟ ಹಿಂಸೆಗಳನ್ನು ತಾಳದೆ ಬಹಳ ಬೇಗನೇ ಬಿದ್ದು ಅನ್ಯಮಾರ್ಗಕ್ಕೆ ಹಿಂತಿರುವ ಮಾನವರಿಗೆ ಹೋಲಿಕೆಯಾಗಿದೆ.

ಆದ್ದರಿಂದ ನಾವೆಲ್ಲರೂ ವಾಕ್ಯಗಳನ್ನು ದಿನವೂ ಪಡಕೊಂಡವರಾಗಿ ಆಳವಾಗಿ ಅದರಲ್ಲಿ ಬೇರೂರೋಣ. ಹಿಂಸಿ ಕಷ್ಟಗಳು ಬಂದಾಗ(ಬಂದೇ ಬರುತ್ತವೆ) ಕೊನೇತನಕ ಸ್ಥಿರವಾಗಿ ಅಲ್ಲಾಡದೆ ತಾಳಿಕೊಳ್ಳೋಣ.

***ಮುಳ್ಳುಗಳಲ್ಲಿ ಬಿದ್ದ ಬೀಜ :–***

ಮುಳ್ಳುಗಳೊಳಗೆ ಬಿದ್ದ ಬೀಜವು ದುಃಖಕರವಾದ, ನಿಂದಾಸ್ಪದ ಅಂತ್ಯಕ್ಕೆ ಬರುತ್ತದೆ. ಅನೇಕರು(ಖಂಡಿತವಾಗಿ ಫರಿಸಾಯರೂ, ಶಾಸ್ತ್ರಿಗಳು) ಐಶ್ವರ್ಯವು ಆಶೀರ್ವಾದವೆಂದು ಅದು ಶಾಪವಲ್ಲವೆಂದೂ ಹೇಳುತ್ತಾರೆ. ಆದರೂ ಐಶ್ವರ್ಯವು ವಂಚಕವಾದದ್ದು, ಅದು ತಾನಾಗಿ ವಂಚಕವಾದದ್ದಲ್ಲ ಆದರ್, ಅದನ್ನು ಸಂಪಾದಿಸುವ ರೀತಿಯೂ, ಅದು ಅಧಿಕವಾಗಿ ಸಿಕ್ಕಿದಾಗ ಆಗುವ ಮನ ಪರಿವರ್ತನೆಯೂ ವಂಚಕವಾದದ್ದು. ಈ ಐಶ್ವರ್ಯವು ನಮ್ಮನ್ನು ದೇವರ ಕಾರ್ಯಗಳಿಂದಲೂ ಸೇವೆಯಿಂದಲೂ ಹೊರಗೆಳೆಯುವುದಾದರೆ ಅದು ನಮ್ಮನ್ನು





ಗುಲಾಮರನ್ನಾಗಿ ಮಾಡಿಕೊಂಡು ನಮ್ಮನ್ನು ಆಳುತ್ತದೆಂದು ತಿಳುಕೊಳ್ಳಬಹುದು. ಆದ್ದರಿಂದ ನಮಗೆ ಒಬ್ಬನೇ ಯಜಮಾನನಿರಲಿ ಅವನು ಯೇಸುಕ್ರಿಸ್ತನೇ ಆಗಿರಲಿ.

***ಒಳ್ಳೆಯ ನೆಲದಲ್ಲಿ ಬಿದ್ದ ಬೀಜ :–***

ಒಳ್ಳೆಯ ನೆಲದಲ್ಲಿ ಬಿದ್ದ ಬೀಜವು ಫಲಕೊಡುತ್ತದೆ. ಕೇಳಿಸಿಕೊಳ್ಳುವುದು, ಅರ್ಥಮಾಡಿಕೊಳ್ಳುವುದು, ಫಲಕೊಡುವುದು ಇವು ಪ್ರತಿಕ್ರಿಯಿಯ ನಿಶ್ಚಯಫಲವಾಗಿದೆ. ಮೊದಲು ದೇವರ ವಾಕ್ಯ ಕೇಳಬೇಕು, ವಾಕ್ಯವನ್ನು ಧ್ಯಾನಿಸಿ ಅದರ ಅರ್ಥವನ್ನು ಗ್ರಹಿಸಿಕೊಳ್ಳಬೇಕು. ಆಗ ಅದನ್ನು ಪ್ರಯೋಗಕ್ಕೆ ತರುವಾಗ ಒಳ್ಳೆಯ ಫಲಕೊಡಲ್ಪಡುತ್ತದೆ. ಫಲದ ಅಳತೆಯು ವ್ಯತ್ಯಾಸವಾದದ್ದು, ದೇವರು ಕೊಟ್ಟ ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ನಾವು ಫಲಕೊಡಬೇಕೆಂಬುದಾಗಿ ಆತನು ಎದಿರು ನೋಡುತ್ತಾನೆ. ನಾವು ಆತನ ಆಕಾಂಕ್ಷೆಗೆ ತಕ್ಕಂತೆ ಮಾಡುತ್ತೇವೋ ಎಂಬುದನ್ನು ಆತನೇ ಅರಿತಿದ್ದಾನೆ. ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅತ್ಯುತ್ತಮವಾಗಿ ನಿರಾಶೆಗೊಳ್ಳದೆ ಮಾಡೋಣ.

ನಾವು ನಮ್ಮ ಸ್ವಂತ ಕೆಲಸವನ್ನು ರುಜುಪಡಿಸಿಕೊಳ್ಳೋಣ, ಒಬ್ಬ ಓಟಗಾರನು ಪ್ರತಿಸಲ ತನ್ನ ಓಟದ ತರವನ್ನು ಯುಕ್ತವಾಗಿ ಏರಿಸಲು ಪ್ರಯತ್ನಿಸುವಂತೆ ನಾವು ನಡೆಯೋಣ. ಇತರರಿಗೆ ನಮ್ಮನ್ನು ಹೋಲಿಸಿ ನೋಡುವುದು ಸರಿಯಲ್ಲ, ಅಂತಹ ಹೋಲಿಕೆಗಳು ನಮ್ಮನ್ನು ಗರ್ವಕ್ಕೂ, ಹೊಟ್ಟೆಕಿಚ್ಚಿಗೂ, ನಿರಾಶೆಗೂ, ಅಧೈರ್ಯಕ್ಕೂ ನಡೆಸುತ್ತವೆ. ಒಂದೇ ಒಂದು ಅಳತೆಗೆ ಹೋಲಿಸಿಕೊಳ್ಳಬೇಕು ಅದು ಯಾರಂದರೆ ಯೇಸುಕ್ರಿಸ್ತನೇ, ಆತನ ಮುಂದೆ ದೈನ್ಯತೆಯಿಂದ ಇರಬೇಕು. ಅದೇ ಸಂದರ್ಭದಲ್ಲಿ ಆತನ ನೀತಿಯ ಅಳತೆಗೂ ಆತನ ಮೇಲಿನ ವಿಶ್ವಾಸದ ಮೂಲಕ ನಮ್ಮ ಬಲಹೀನತೆಯನ್ನು ಜಯಿಸುವ ಮಾರ್ಗಕ್ಕೂ ನಾವು ಸಾಗಬೇಕು. ದೇವರು ನಮಗೆ ಕೊಟ್ಟ ಕೃಪೆಯ ಪೂರ್ಣ ಅಳತೆಗಳಲ್ಲಿ ಫಲ ಕೊಡಲಿಕ್ಕಾಗಿ ಪ್ರಯತ್ನಿಸೋಣ.